SRI A. V. MATHIKATTI.—We are hear to listen to our whip. But what about your side ?

SRI D. DEVARAJ URS.—Whatever time, within which we have to discuss, we will confine to that. I would request the hon. Leader of the Opposition also to instruct likewise.

SRI R. GUNDU RAO.—If the Leader of the Treasury Benches and the Chief Minister assures me that he will take care of his side, I also say that I will take care of my side. But the way you were sitting silent will make me also to sit quiet and allow them to speak.

SRI D. DEVARAJ URS.—So far as tomorrow is concerned in the 2½ hours discussion, we will confine ourselves to the timings.

ಶ್ರೀ ಆರ್. ಗುಂಡೂರಾವ್.—ಯಾದ್‌ಗಿರ್ ಗೋಲಿಬಾರ್ ವಿಷಯವಾಗಿ ಎರಡೂವರೆ ಗಂಟೆ ಚರ್ಚೆ ಇದೆ, ಮಾನ್ಯ ಮುಖ್ಯ ಮಂತ್ರಿಗಳು ಅವರ ಕಡೆಯಿಂದ ಸಹಕಾರ ಕೊಡುತ್ತೇವೆಂದು ಹೇಳಿದ್ದಾರೆ, ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು ಎಂದು ಇಟ್ಟುಕೊಳ್ಳೋಣ. ಇದಾದನಂತರ ಪ್ರಿವಿಲೇಜ್ ಮೋಷನ್ ಇದೆ. ಇದು ತಪಗೆಲ್ಲರಿಗೂ ಗೊತ್ತಿರುವ ಹಾಗೆ ಅಧ್ಯಕ್ಷರನ್ನು ಕನ್‌ವಿನ್ಸ್ ಮಾಡುವುದಕ್ಕೆ ಸುಮಾರು ಒಂದು ಗಂಟೆಯಾದರೂ ಬೇಕಾಗುತ್ತದೆ. ಈ ಎಲ್ಲಾ ವಿಷಯಗಳನ್ನು ನಾಳೆಯ ದಿವಸವೇ ಮುಗಿಸುವುದಕ್ಕೆ ಆಗುವುದಿಲ್ಲ. ಇದಕ್ಕೆಲ್ಲಾ ಸಾಕಷ್ಟು ಸಮಯವನ್ನು ಒದಗಿಸಿ ಕೊಡುತ್ತೇವೆಂದು ತಾವು ಭರವಸೆ ಕೊಟ್ಟರೆ ನಾವು ಖಂಡಿತವಾಗಿಯೂ ಸಹಕರಿಸುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷಳೇ, ನಮ್ಮ ನಾಯಕರು ಹೇಳಿದ ಪ್ರಕಾರ ತಾವು ಅನುಮತಿ ಕೊಟ್ಟರೆ, ನಾಳೆ ಅಥವಾ ಸೋಮವಾರದ ದಿವಸ ನಮ್ಮ ವಿಷಯವನ್ನು ಎತ್ತುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ವಿಷಯದ ಮೇಲೆ ಮಾತನಾಡಬೇಕು.

ಶ್ರೀ ಮಳ್ಳೂರು ಆನಂದರಾವ್.—ವಿರೋಧ ಪಕ್ಷದವರು ಮಾತನಾಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ, ನಾನು ಮಾತನಾಡುತ್ತೇನೆ.

LEGISLATIVE BUSINESS

The Karnataka Ministers Salaries and Allowances (Second Amendment Bill, 1979

†ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದ ಈ ಸ್ಯಾಲರಿ ಅಮೆಂಡ್‌ಮೆಂಟ್ ಬಿಲ್ ಏನು ಇದೆ, ಅದರ ಮೊದಲನೆಯ ಭಾಗಕ್ಕೆ ನಾನು ಒಪ್ಪಿಗೆ ಕೊಡುತ್ತೇನೆ. ಪೆಟ್ರೋಲ್ ಕ್ರಯ ಜಾಸ್ತಿಯಾಗಿದೆ, ಅದಕ್ಕೋಸ್ಕರ ಟಿ.ಎ. ಮತ್ತು ಡಿ.ಎ. ಜಾಸ್ತಿ ಕೊಡಬೇಕು ಎಂದು ತಿದ್ದುಪಡಿಯನ್ನು ತಂದಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳುವುದರಲ್ಲಿ ಯಾವ ತರಹದ ಭಿನ್ನಾಭಿಪ್ರಾಯವೂ ಇಲ್ಲ, ಇದು ಸೂಕ್ತವಾಗಿಯೇ ಇದೆ. ತಮಗೆಲ್ಲಾ ಗೊತ್ತಿರುವ ಹಾಗೆ ಪೆಟ್ರೋಲ್ ಬೆಲೆ, ಡೀಸಲ್‌ಬೆಲೆ ಜಾಸ್ತಿಯಾಗಿದೆ. ಮಂತ್ರಿಗಳು ಅಧ್ಯಕ್ಷರು ಪ್ರಯಾಣ ಮಾಡುವಾಗ ಹೆಚ್ಚಿನ ಭಾಗವನ್ನು ಅವರ ಕೈಯಿಂದ ಕೊಡುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ, ಕಿಲೋ ಮೀಟರ್‌ಗೆ ೭೫ ಪೈಸೆ ಇದ್ದುದನ್ನು ಒಂದು ರೂಪಾಯಿಗೆ ಏರಿಸಿದ್ದಾರೆ.

(ಉಪ ಸಭಾಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಇದಕ್ಕೆ ನಮ್ಮ ಅನುಮತಿಯನ್ನು ಕೊಡುವುದಕ್ಕೆ ಯಾರದು ವಿರೋಧವಿಲ್ಲ. ಆದಷ್ಟೂ ಮಟ್ಟಿಗೆ ಮಂತ್ರಿಗಳು ಹಾಗೂ ಇತರರು ಪ್ರಯಾಣ ಮಾಡುವುದನ್ನು ಕಡಿಮೆ ಮಾಡಬೇಕು. ಈ ದಿಸೆಯಲ್ಲಿ ಕೇಂದ್ರ ಸರ್ಕಾರದಿಂದಲೂ ನಮ್ಮ ಸರ್ಕಾರಕ್ಕೆ ಸೂಚನೆ ಬಂದಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಮಂತ್ರಿವರ್ಯರುಗಳು ನಾವು ಸರ್ಕಾರಿ ಕೆಲಸಕ್ಕೋಸ್ಕರವೇ ಹೋಗುತ್ತೇವೆಂದು ಕಾರಣ ಕೊಡಬಹುದು ಆದರೆ ದೇಶದ ಆರ್ಥಿಕ ಸ್ಥಿತಿಯನ್ನು ಹೊಂದಿಕೊಂಡು ನಾವು ನಡೆಯಬೇಕಾಗಿದೆ. ಇದು ನಮ್ಮ ರಾಜ್ಯಕ್ಕೆ ಸೀಮಿತವಾಗಿದೆ ಎಂದಲ್ಲ, ಇಡೀ ರಾಷ್ಟ್ರಕ್ಕೆ ಇದು ಒಂದು ದೊಡ್ಡ ಸಮಸ್ಯೆಯಾಗಿ ಬಂದಿದೆ. ಬಹುಶಃ ಇದೇ ರೀತಿಯ ಸಮಸ್ಯೆ ಇದ್ದರೆ, ಅನೇಕ ನಮ್ಮ ಪ್ರಗತಿಯ ಕಾರ್ಯಕ್ರಮಗಳು ನಡೆಯುವುದಕ್ಕೆ ತೊಂದರೆಯಾಗುವಂಥ ಪರಿಸ್ಥಿತಿ ಬರುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಇದಕ್ಕೆ ನಮ್ಮ ಕಡೆಯಿಂದ ಯಾವ ತರಹದ ವಿರೋಧವೂ ಇಲ್ಲ. ಆದಾಗ್ಯೂ, ಮಂತ್ರಿಗಳು ಮೌರ್ಷ್ಟ್ ಡ್ಯಾಂ ಒಡೆದಾಗ ನೋಡಬೇಕು ಎಂದು ಹೇಳುವುದು, ಏನೋ ಅಗಾಧವಾದ ಅನುಭವತಾಗಿದ್ದರೆ. ಆಪಘಾತವಾಗಿದ್ದರೆ ಮತ್ತು ಅದು ರಾಜ್ಯದ ಎಲ್ಲರ ಗಮನವನ್ನು ಸೆಳೆಯುವಂಥಾದ್ದಾಗಿದ್ದರೆ ಮಾತ್ರ ಪ್ರಯಾಣ ಮಾಡಬೇಕೇ ಹೊರತು ಬೇರೆಯ ಸಣ್ಣ ಪುಟ್ಟ ಕೆಲಸ ಕಾರ್ಯಗಳಿಗೆ ಹೋಗುವುದಕ್ಕೆ ಅಷ್ಟು ಗಮನ ಕೊಡಬಾರದು ಎಂದು ನಾನು ಹೇಳುತ್ತೇನೆ. ಎಲ್ಲಾ ಪೆಟ್ರೋಲ್ ಬಂಕ್ ಮುಂದೆ ನಾವು ನೋಡಿದರೆ ಅನೇಕ ಲಾರಿಗಳು ಡೀಸಲ್‌ಗಾಗಿ ನಿಂತಿರುತ್ತವೆ, ಕಾರುಗಳೂ ಸಹ ನಿಲ್ಲುವಂಥ ಪರಿಸ್ಥಿತಿ ಬರಬಹುದು.

ಈ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಸೂಕ್ತವಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ಇದು ಒಂದು ಮಹತ್ವರವಾದ ಸಮಸ್ಯೆಯಾಗಿದೆ. ಆದಕಾರಣ ಮಾನ್ಯ ಮಂತ್ರಿಗಳು ಅಗತ್ಯವಿರುವ ಕಡೆಗಳಿಗೆ ಮಾತ್ರ ಹೋಗಬೇಕೇ ಹೊರತು ಬೇರೆ ಸಮಯದಲ್ಲಿ ಪ್ರವಾಸ ಮಾಡುವುದನ್ನು ಆದಷ್ಟು ಕಡಿಮೆ ಮಾಡುತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಂತ್ರಿಗಳು ಪ್ರವಾಸ ಹೋದರೆ ಅಥವಾ ಮುಖ್ಯಮಂತ್ರಿಗಳು ಪ್ರವಾಸ ಹೋದರೆ ಅಥವಾ ರಾಜ್ಯ ಮಂತ್ರಿಗಳು ಪ್ರವಾಸ ಹೋದರೆ ಅಗತ್ಯವಿರುವ ಅಧಿಕಾರಿಗಳೂ ಹೋಗುತ್ತಾರೆ, ಅಗತ್ಯವಿಲ್ಲದಿರುವ ಅಧಿಕಾರಿಗಳೂ ಹೋಗುತ್ತಾರೆ. ಅದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಮಂತ್ರಿಗಳು ಜಿಲ್ಲಾ ಕೇಂದ್ರ ಇಲ್ಲವೇ ತಾಲ್ಲೂಕ್ ಕೇಂದ್ರಕ್ಕೆ ಯಾವುದೇ ಒಂದು ಕಾರ್ಯಕ್ಕೆ ಹೋಗುವಾಗ ಯಾವ ಯಾವ ಅಧಿಕಾರಿಗಳು ಅಗತ್ಯವಾಗಿ ಹೋಗಬೇಕೋ ಅವರೆಲ್ಲರೂ ಒಂದೊಂದು ಕಾರಿನಲ್ಲಿ ಹೋಗುವುದಕ್ಕಿಂತ ಎಲ್ಲರೂ ಒಂದು ಡೀಜಲ್ ವ್ಯಾನ್‌ನಲ್ಲಿ ಹೋದರೆ, ಬಹುಶಃ ಪೆಟ್ರೋಲ್ ಖರ್ಚನ್ನು ಕಡಿಮೆ ಮಾಡಬಹುದು. ಅದಕ್ಕಾಗಿ ಸರ್ಕಾರದವರು ಜಿಲ್ಲಾ ಕೇಂದ್ರಗಳಲ್ಲಿ ೧೨ ಅಥವಾ ೧೫ ಸೀಟ್‌ಗಳಿರುವಂತಹ ವ್ಯಾನ್‌ಗಳನು ಒದಗಿಸುವುದು ಒಳ್ಳೆಯದು ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಪೆಟ್ರೋಲ್ ದರ ೨ ರೂಪಾಯಿಗಳಿದ್ದಾಗ ಮತ್ತು ೩ ರೂಪಾಯಿಗಳಿದ್ದಾಗ ಹಣ ಕಾಸಿನ ಪರಿಸ್ಥಿತಿ ಚೆನ್ನಾಗಿತ್ತು. ಆಗ ಸಾರ್ವಜನಿಕರ ಮೇಲೂ ಸಹ ಹೆಚ್ಚಿನ ಹೊರೆ ಬೀಳುತ್ತಿರಲಿಲ್ಲ. ಆದರೆ ಇವೊತ್ತಿನದಿವಸ ಆ ಪರಿಸ್ಥಿತಿ ಇಲ್ಲ. ನಮ್ಮ ದೇಶಕ್ಕೆ ಪೆಟ್ರೋಲನ್ನು ಕಳುಹಿಸುವಂತಹ ರಾಷ್ಟ್ರಗಳಿಗೂ ಮತ್ತು ಕೇಂದ್ರ ಸರ್ಕಾರಕ್ಕೂ ಸರಿಯಾದಂಥ ಒಂದು ಒಡಂಬಡಿಕೆಯಾಗದಿದ್ದರೆ ಪೆಟ್ರೋಲ್ ದರ ಇನ್ನೂ ಜಾಸ್ತಿಯಾಗಬಹುದು. ಆ ರೀತಿ ಏನಾದರು ಆದರೆ ಮುಂದೆ ಈ ಸಭೆ ಸೇರಿದಾಗ ಮತೊಂದಾ ತಿದ್ದುಪಡಿ ತರುವ ಅಗತ್ಯ ಕಂಡು ಬರಬಹುದು. ಅಷ್ಟೊಂದು ವೇಗದಲ್ಲಿ ಇದರ ದರ ಜಾಸ್ತಿಯಾಗುತ್ತಿದೆ. ಪೆಟ್ರೋಲ್ ದರವನ್ನು ಮತ್ತೆ ಜಾಸ್ತಿ ಮಾಬೇಕಾಗುತ್ತದೆಂದು ಕೇಂದ್ರದ ಮಂತ್ರಿಗಳು ಹೇಳುತ್ತಿದ್ದಾರೆ. ಆದಕಾರಣ ಇದರ ವಿಚಾರದಲ್ಲಿ ಸರ್ಕಾರದವರು ಆದಷ್ಟೂ ಮಿತವ್ಯಯ ಅನುಸರಿಸುವುದು ಒಳ್ಳೆಯದು. ಇಲ್ಲದಿದ್ದರೆ ಸಾರ್ವಜನಿಕರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ. ಕಳೆದ ೨-೩ ತಿಂಗಳುಗಳಿಂದ ಒಂದೊಂದು ಸಮಾರಂಭಕ್ಕೆ ೩ ಜನ ಮಂತ್ರಿಗಳು ಇಲ್ಲವೇ ೪ ಜನ ಮಂತ್ರಿಗಳು ಹೋಗತ್ತಿರುವುದು ಜಾಸ್ತಿಯಾಗುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಯಾವುದೇ ಒಂದು ಟೂರ್ ಪ್ರೋಗ್ರಾಮ್‌ನ್ನು ತರಿಸಿ ನೋಡಿದರೆ ಇದು ತಮಗೆ ತಿಳಿಯುತ್ತದೆ. ಒಂದು ಕಟ್ಟಡವನ್ನು ಓಪನ್ ಮಾಡಲು ಒಬ್ಬರು ಮಂತ್ರಿಗಳಾದರೆ, ಅದರ ಅಧ್ಯಕ್ಷತೆ ವಹಿಸಲು ಇನ್ನೊಬ್ಬರು ಮಂತ್ರಿಗಳು. ಹೀಗೆ ೩-೪ ಜನ ಮಂತ್ರಿಗಳು ಹೋಗುತ್ತಾರೆ. ಇದಕ್ಕೆ ಕಾರಣ ಏನೇ ಇರಬಹುದು, ಟಿ.ಎ. ಸಿಗುತ್ತದೆಂದು ಹೋಗಬಹುದು, ಆದರೆ ಇದು ಸರಿಯಲ್ಲ; ಅಗತ್ಯವಿದ್ದರೆ ಮಾತ್ರ ಹೋಗಬೇಕು. ಇಲ್ಲದಿದ್ದರೆ ಮಿತವ್ಯಯ ಸಾಧನೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮ ಕಾಲದಲ್ಲಿಯೂ ನಡೆಯುತ್ತಿರಲಿಲ್ಲವೇ?

ಶ್ರೀ ಆರ್. ಗುಂಡೂರಾವ್.—ನಮ್ಮ ಕಾಲದಲ್ಲಿ ದರ ಕಡಿಮೆ ಇತ್ತು, ಆದರೆ ಕಳೆದ ೩ ತಿಂಗಳುಗಳಿಂದ ದರ ಜಾಸ್ತಿಯಾಗಿದೆ. ಜೊತೆಗೆ ತೆರಿಗೆ ಪ್ರಮಾಣ ಸಹ ಜಾಸ್ತಿಯಾಗಿದೆ. ಪೆಟ್ರೋಲ್ ಮತ್ತು ಡೀಜಲ್ ಬೆಲೆಗಳ ಏರಿಕೆಯಿಂದ ಇತರ ಎಲ್ಲ ಸಾಮಾನುಗಳ ದರವೂ ಜಾಸ್ತಿಯಾಗುತಿದೆ. ಇದನು

ಎಲ್ಲರೂ ಒಪ್ಪುತ್ತಾರೆ. ಈ ಹಂತದಲ್ಲಿ ಸರ್ಕಾರದವರು ಪುನಃ ತೆರಿಗೆಯನ್ನು ಜಾಸ್ತಿ ಮಾಡಿದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದಕಾರಣ ಸರ್ಕಾರದವರು ಬಹಳವಾಗಿ ಆಲೋಚನೆ ಮಾಡಿ ಮಿತವ್ಯಯ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಸದನದಲ್ಲಿರುವ ಆ ಕಡೆಯ ಸದಸ್ಯರು, ಈ ಕಡೆಯ ಸದಸ್ಯರು ಮತ್ತು ಸಾರ್ವಜನಿಕರು ಒಪ್ಪುವ ರೀತಿಯಲ್ಲಿ ಖರ್ಚನ್ನು ಕಡಿಮೆ ಮಾಡಬೇಕು. ಆ ಒಂದು ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು ಅಂದರೆ ಮಂತ್ರಿಗಳೆಲ್ಲಾ ಕಛೇರಿಯಲ್ಲಿಯೇ ಕುಳಿತು ಕೆಲಸ ಮಾಡಬೇಕೆಂದು ನಾನು ಹೇಳುವುದಿಲ್ಲ. ತಿಂಗಳಿಗೆ ಎರಡು ದಿವಸ ಮಾತ್ರ ಪ್ರವಾಸ ಹೋಗಬೇಕೆಂದು ನಾನು ಹೇಳುವುದಿಲ್ಲ. ಆದರೆ ಅಗತ್ಯವಿರುವ ಕಡೆಗಳಿಗೆ ಮಾತ್ರ ಹೋಗಬೇಕೆಂದು ಹೇಳುತ್ತೇನೆ. ಒಬ್ಬರು ಮಂತ್ರಿಗಳು ಪ್ರವಾಸ ಹೋದರೆ ಏನು ಖರ್ಚು ಬರುತ್ತದೋ ಆದರೆ ನಾಲ್ಕರಷ್ಟು ಖರ್ಚು ಅವರ ಜೊತೆಯಲ್ಲಿ ಹೋಗುವ ಅಧಿಕಾರಿಗಳಿಗಾಗಿ ಆಗುತ್ತದೆ. ಇದರ ಒಂದು ಹೊರೆ ಜನತೆಯ ಮೇಲೆ ಬೀಳುತ್ತದೆ. ಈ ದೃಷ್ಟಿಯಿಂದ ಮಿತವ್ಯಯ ಅನುಸರಿಸುವುದು ಬಹಳ ಮುಖ್ಯವಾದುದು. ಇಲ್ಲಿ ೭೫ ಪೈಸೆ ಎಂದಿರುವುದನ್ನು ಒಂದು ರೂಪಾಯಿ ಮಾಡಬೇಕೆಂದು ಹೇಳಂವುದು ತಪ್ಪು ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಇದನ್ನು ಅವಶ್ಯಕವಾಗಿ ಕೊಡಬೇಕಾಗಿದೆ. ಆದರೆ ಮಂತ್ರಿಗಳು ಪ್ರಯಾಣ ಮಾಡುವುದನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಮತ್ತು ಅಧಿಕಾರಿಗಳು ಅಂದರೆ ಡಿ.ಸಿ. ಅವರು, ಎಸ್.ಪಿ. ಅವರು ಅಥವಾ ಇಂಜಿನಿಯರ್‌ಗಳು ಬೇರೆಬೇರೆ ಕಾರಿನಲ್ಲಿ ಮಂತ್ರಿಗಳ ಜೊತೆಯಲ್ಲಿ ಹೋಗುವುದಕ್ಕೆ ಬದಲು ನಾನು ಮೊದಲೇ ಹೇಳಿದಂತೆ ಒಂದು ಡೀಜಲ್ ವ್ಯಾನ್‌ನಲ್ಲಿ ಹೋದರೆ ಮಿತವ್ಯಯವನ್ನು ಸಾಧಿಸಬಹುದು. ಮಂತ್ರಿಗಳು ಜಿಲ್ಲಾ ಕೇಂದ್ರದವರೆಗೆ ತಮ್ಮ ಕಾರಿನಲ್ಲಿ ಹೋಗಿ ಅಲ್ಲಿಂದ ಸಮಾರಂಭದ ಸ್ಥಳಕ್ಕೆ ಅಧಿಕಾರಿಗಳ ಜೊತೆಯಲ್ಲಿಯೇ ವ್ಯಾನ್‌ನಲ್ಲಿ ಹೋಗುವುದು ಇನ್ನೂ ಒಳ್ಳೆಯದು. ಈ ಕೆಲಸವನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಪೆಟ್ರೋಲ್ ದರ ಜಾಸ್ತಿಯಾಗಿರುವುದರಿಂದ ಇಲ್ಲಿ ಇದಕ್ಕೆ ತಿದ್ದುಪಡಿ ತಂದಿರುವುದು ಸರಿಯಾಗಿದೆ. ವಿರೋಧ ಮಾಡಬೇಕೆಂಬ ಕಾರಣದಿಂದ ನಾನು ಇದನ್ನು ವಿರೋಧ ಮಾಡುವುದಿಲ್ಲ. ಆದರೆ ನಾನು ಇಲ್ಲಿಯವರೆಗೆ ಕೊಟ್ಟ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ಅದರಂತೆ ನಡೆದುಕೊಳ್ಳುತ್ತೇವೆಂದು ನಮಗೆ ಭರವಸೆ ಕೊಟ್ಟರೆ ಇದಕ್ಕೆ ಸರ್ವಾನುಮತದಿಂದ ಒಪ್ಪಿಗೆ ಕೊಡಲು ನಮ್ಮ ವಿರೋಧವೇನೂ ಇಲ್ಲ. ಈಗ ನಮಗೆ ಇಲ್ಲಿ ಭರವಸೆ ಕೊಟ್ಟು ಪುನಃ ಆ ಭರವಸೆಯನ್ನು ಉಲ್ಲಂಘನೆ ಮಾಡಿ, ಮೊದಲಿನ ರೀತಿಯಲ್ಲಿಯೇ ಒಂದೊಂದು ಸಮಾರಂಭಕ್ಕೆ ೪-೫ ಜನ ಮಂತ್ರಿಗಳು ಹೋಗುವುದಾದರೆ, ನಾವು ಕೊಟ್ಟ ಒಪ್ಪಿಗೆಯನ್ನು ಪುನರ್ ಆಲೋಚನೆ ಮಾಡಬೇಕಾಗುತ್ತದೆ. ಆದಕ್ಕೆ ಅವಕಾಶ ಕೊಡಲಾರರು ಎಂಬ ವಿಶ್ವಾಸದಿಂದ, ನಂಬಿಕೆಯಿಂದ ಈ ಒಂದು ತಿದ್ದುಪಡಿಗೆ ಒಪ್ಪಿಗೆ ಕೊಡಲು ನನ್ನ ವಿರೋಧವೇನೂ ಇಲ್ಲವೆಂದು ಹೇಳುತ್ತೇನೆ.

ಇನ್ನು ಇದರಲ್ಲಿ ಮನೆ ಕಟ್ಟಿಸಿಕೊಳ್ಳಲು ಅಡ್ವಾನ್ಸ್ ಕೊಡುವ ಬಗ್ಗೆ ಒಂದು ತಿದ್ದುಪಡಿ ಇದೆ. ಇದು ಗಂಭೀರವಾದ ವಿಷಯ. ಇಲ್ಲಿ ತಾಂತ್ರಿಕವಾದಂಥ ಒಂದು ಪ್ರಶ್ನೆ ಏನು ಬರುತ್ತದೆಂದರೆ ಸರ್ಕಾರದ ಅಧಿಕಾರಿಗಳಾದರೆ ೨೫ ವರ್ಷಗಳವರೆಗಾದರೂ ಕೆಲಸ ಮಾಡುತ್ತಾರೆ. ಈಗ ಐ.ಎ.ಎಸ್., ಐ.ಪಿ.ಎಸ್. ಕೆ.ಎ.ಎಸ್. ಇಲ್ಲವೇ ಎಸ್.ಜಿ.ಒ. ಗಳಿಗೆ ಸರ್ಕಾರ ಮನೆ ಕಟ್ಟಿಸಿಕೊಳ್ಳಲು ಸಾಲ ಕೊಡುತ್ತದೆ. ಈ ಸಾಲದ ಹಣವನ್ನು ಅವರ ಸಂಬಳದಲ್ಲಿ ಹಿಡಿಯಲಾಗುತ್ತದೆ. ಈ ರೀತಿ ತೆಗೆದುಕೊಂಡ ಸಾಲವನ್ನು ತೀರಿಸುವಂತಹ ಒಂದು ಭರವಸೆ ಈ ಅಧಿಕಾರಿಗಳಿಗಿರುತ್ತದೆ. ಒಂದುವೇಳೆ ಕೆಲಸದಿಂದ ನಿವೃತ್ತಿಯಾದರೆ ಇಲ್ಲವೇ ಕೆಲವು ಲೋಪದೋಷಗಳಿಂದ ಸರ್ಕಾರದವರು ಯಾವುದೇ ಅಧಿಕಾರಿಯನ್ನು ಕೆಲಸದಿಂದ ವಜಾ ಮಾಡಿದರೆ, ಸಾಲದ ಹಣವನ್ನು ಪೆನ್‌ಷನ್‌ನಲ್ಲಿ ಹಿಡಿಯಲು ಅವಕಾಶವಿರುತ್ತದೆ. ಆದರೆ ಇಲ್ಲಿ ಮಂತ್ರಿಗಳಿಗೆ ಮನೆ ಕಟ್ಟಿಸಿಕೊಳ್ಳಲು ಹಣವನ್ನು ಕೊಡುವ ಬಗ್ಗೆ ಹೇಳಿರುವುದನ್ನು ನೋಡಿದರೆ ಅದನ್ನು ಅವರು ತೀರಿಸುವ ಬಗೆಯಾದರೂ ಹೇಗೆ? ಏಕೆಂದರೆ, ಇವೊತ್ತಿನ ರಾಜಕೀಯ ಪರಿಸ್ಥಿತಿಯನ್ನು ನೋಡಿದರೆ ಯಾವ ಮಂತ್ರಿ ಯಾವ ಘಳಿಗೆಯಲ್ಲಿ ಹುನೆಗೆ ಹೋಗುತ್ತಾರೋ, ಯಾವ ಘಳಿಗೆಯಲ್ಲಿ ಪ್ರಮಾಣವಚನ ಸ್ವೀಕಾರ ಮಾಡುತ್ತಾರೋ ಗೊತ್ತಿಲ್ಲ. ಯಾವ ಘಳಿಗೆಯಲ್ಲಿ ಯಾವ ಮಂತ್ರಿಮಂಡಲ ಮನೆಗೆ ಹೋಗುತ್ತದೋ ಅಥವಾ ಅಧಿಕಾರಕ್ಕೆ ಬರುತ್ತದೋ ಗೊತ್ತಿಲ್ಲ.

3.30 P.M.

ಈಗಾಗಲೇ, ಬಲಿಷ್ಠವಾದಂತಹ ಸುಮಾರು ೩೦೦ ಸದಸ್ಯರಿಗಿಂತಲೂ ಹೆಚ್ಚಿಗೆ ಪಡೆದಿದ್ದ, ಐದು ವರ್ಷಗಳ ಕಾಲ ನಮ್ಮನ್ನು ಯಾರೂ ಅಲ್ಲಾಡಿಸುವುದಕ್ಕಾಗುವುದಿಲ್ಲವೆಂದು ಭಾಷಣ ಮಾಡಿದಂತಹ ಶ್ರೀ ಮುರಾರ್ಜಿ ದೇಸಾಯಿಯವರ ಸರ್ಕಾರ ಕೇವಲ ಎರಡು ವರ್ಷಗಳಲ್ಲಿ ಮಲಗಿತು. ಅದೇ ಪ್ರಕಾರ ಇನ್ನೊಂದು ಮಂತ್ರಿಮಂಡಲ ಸ್ಥಾಪನೆಯಾಗಿ ಆ ಮಂತ್ರಿ ಮಂಡಲ ಕೇವಲ ಒಂದು ತಿಂಗಳ ಒಳಗೆ ಹೋಯಿತು. ಈ ಮಂತ್ರಿಮಂಡಲದಲ್ಲೂ ಕೆಲವರು ಮಂತ್ರಿಗಳಾಗಿದ್ದರು. ಅವರಲ್ಲಿ ಕೆಲವರು ಈಗ ಇರಬಹುದು. ಈಗ ಮತ್ತೆ ಚುನಾವಣೆ ಬರುತ್ತಾ ಇದೆ. ಲೋಕಸಭೆ ಚುನಾವಣೆ ಜೊತೆಗೆ ಕೆಲವು ರಾಜ್ಯ ಗಳಲ್ಲಿ ವಿಧಾನಸಭೆಗೆ ಚುನಾವಣೆ ನಡೆಯುತ್ತದೆ. ಈ ಪರಿಸ್ಥಿತಿಯಲ್ಲಿ ಚುನಾವಣೆ ಕಳೆದ ಮೇಲೆ ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೆ ಎಂಬುದನ್ನು ಹೇಳುವುದಕ್ಕೆ ಬರುವುದಿಲ್ಲ. ಆದುದರಿಂದ ಅಧ್ಯಕ್ಷರೆ, ಈ ಸಾಲವನ್ನು ಎಂದರೆ ೮೦,೦೦೦ ರೂಪಾಯಿಗಳನ್ನು ಏನು ಮಂತ್ರಿಗಳಿಗೆ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರು ಮಸೂದೆಯನ್ನು ತಂದಿದ್ದಾರೆ ಇದನ್ನು ನೋಡಿದರೆ, ಸಾಲವನ್ನು ವಾಪಸ್ ಕೊಡುವುದರ ಬಗ್ಗೆಯೂ ಯೋಚನೆ ಮಾಡಬೇಕಾಗುತ್ತದೆ. ನಾನೂ ಒಬ್ಬ ಮಂತ್ರಿಯಾಗಿದ್ದೆ ನನ್ನನ್ನು ಮಂತ್ರಿ ಮಂಡಲದಿಂದ ತೆಗೆದು ಹಾಕಿಬಿಟ್ಟರು. ಮಾನ್ಯ ಮುಖ್ಯಮಂತ್ರಿಯವರು ಇನ್ನೂ ಎಷ್ಟು ಜನರನ್ನು ಸಚಿವರನ್ನಾಗಿ ಸೇರಿಸಿಕೊಳ್ಳುತ್ತಾರೋ ಅಥವಾ ತೆಗೆದು ಬಿಡುತ್ತಾರೋ ಗೊತ್ತಿಲ್ಲ. ಈ ದಿನ ಮಂತ್ರಿಗಳ ಸ್ಥಾನ ಶಾಶ್ವತವಲ್ಲ. ಯಾವ ಮಂತ್ರಿಗೆ ಮನೆ ಕಟ್ಟುವುದಕ್ಕೆ ಸಾಧ್ಯವಿಲ್ಲವೋ ಹಾಗೂ ಯಾರಿಗೆ ಸ್ವಂತ ಮನೆ ಇಲ್ಲವೋ ಅಂತಹ ಮಂತ್ರಿಗಳಿಗೆ ನೀವು ೮೦,೦೦೦ ರೂಪಾಯಿ ಸಾಲವನ್ನು ಕೊಟ್ಟರೆ ಆ ಸಾಲವನ್ನು ವಾಪಸ್ ಪಡೆಯುವ ವಿಧಾನ ಹೇಗೆ ? ಅದು ಇಲ್ಲಿ ಬರುತ್ತದೆ. ಇವತ್ತು ನಾವೇ ಆಗಲಿ ಆಥವಾ ಮುಖ್ಯಮಂತ್ರಿಯವರೇ ಆಗಲಿ ಮಧ್ಯಮ ವರ್ಗದಿಂದ ಬಂದಂಥವರಿದ್ದೇವೆ. ಈ ದಿನ ಮುಖ್ಯ ಮಂತ್ರಿಯವರು ೫ ವರ್ಷಗಳ ಕಾಲ ಯಾವ ಮಂತ್ರಿಯವರನ್ನೇ ತೆಗೆಯುವುದಿಲ್ಲ ಅಥವಾ ಮಂತ್ರಿಮಂಡಲ ಬಲಯುತವಾಗಿ ೫ ವರ್ಷ ಇರುತ್ತದೆ ಎಂದು ಭರವಸೆ ಕೊಟ್ಟರೆ ಆಗ ಮಂತ್ರಿಗಳು ಸಾಲವನ್ನು ಪಡೆಯ ಬಹುದು. ಆದರೆ ಮಂತ್ರಿ ಪದವಿ, ಶಾಶ್ವತವಲ್ಲದವರು ಸಾಲವನ್ನು ಪಡೆದರೆ ಅದನ್ನು ಹಿಂದಿರುಗಿಸ ತಕ್ಕದ್ದನ್ನು ಯೋಚಿಸಬೇಕಾಗುತ್ತದೆ. ಈಗೇನೋ ಅವರಿಗೆ ಸಂಬಳ ಬರುತ್ತದೆ. ಸಾವಿರದ ಐದು ನೂರೋ, ಸಾವಿರದ ಎಂಟುನೂರೋ ರೂಪಾಯಿಯವರೆಗೆ ಸಂಬಳ ಹಾಗೂ ಟಿ.ಎ. ಬರುತ್ತದೆ. ತಿಂಗಳಿಗೆ ಈಗ ೫೦೦ ರೂಪಾಯಿಯವರೆಗೆ ವಜಾ ಮಾಡಬಹುದು. ಆದರೆ ಅವರು ಮಂತ್ರಿಗಿರಿಯಿಂದ ಇಳಿದಮೇಲೆ ಎಲ್ಲಿಂದ ತರುತ್ತಾರೆ ? ಯಾರಿಗೆ ಪರ್ಸನಲ್ ಇನ್‌ಕಂ ಇರುತ್ತದೆ, ಅವರು ಹಿಂದಿರುಗಿಸುತ್ತಾರೆ. ಮಿಕ್ಕ ವರು ಏನು ಮಾಡಿಯಾರು ? ಸ್ವಂತ ಗದ್ದೆ ಇರುವವರು, ತೋಟ ಇರುವವರು ಕೈಗಾರಿಕೆ ನಡೆಸುವವರು, ಶೇರ್‌ಗಳನ್ನು ಹೊಂದಿರತಕ್ಕ ಮಂತ್ರಿಗಳು ಈ ಅಡ್ವಾನ್ಸ್ ಪಡೆಯುವುದಕ್ಕೆ ಬರುವುದಿಲ್ಲ. ಅವರಿಗೆ ಬೇರೆ ಜನರಿರುತ್ತಾರೆ. ಬ್ಯಾಂಕ್‌ಗಳು ಇರುತ್ತವೆ. ಸಾಲವನ್ನು ಪಡೆದು ತೀರಿಸುತ್ತಾರೆ. ಆದರೆ ಸ್ವಂತ ಆದಾಯ ಇಲ್ಲ ದಿದ್ದವರಿಗೆ ಕೊಟ್ಟರೆ ಹಣವನ್ನು ವಾಪಸ್ ಪಡೆಯುವುದು ಬಹಳ ಕಷ್ಟವಾಗುತ್ತದೆ. ಇದು ಒಂದು ಬಹಳ ದೊಡ್ಡ ಸಮಸ್ಯೆಯಾಗುತ್ತದೆ. ಈ ದಿನ ಸರ್ಕಾರದವರು ಅಧಿಕಾರಿಗಳಿಗೆ ಮನೆ ಕಟ್ಟುವುದಕ್ಕೆ ಸಾಲವನ್ನು ಕೊಟ್ಟರೆ ಜನತೆ ಹೆಚ್ಚು ಟೀಕೆ ಮಾಡುವುದಿಲ್ಲ. ಅಥವಾ ಇನ್ನೊಂದು ವರ್ಗದ ಜನರಿಗೆ ಸಾಲವನ್ನು ಕೊಟ್ಟರೆ ಯಾರು ಟೀಕೆಟಿಪ್ಪಣಿ ಮಾಡುವುದಿಲ್ಲ. ಆದರೆ ಇವತ್ತು ರಾಜಕೀಯದವರಾಗಿರಲಿ, ಶಾಸಕನಾಗಿರಲಿ, ಮಂತ್ರಿಯಾಗಿರಲಿ ಯಾರು ಇರುತ್ತಾರೆ ಅವರು ಯಾವ ಒಂದು ಸರ್ಕಾರದ ಹಣವನ್ನು ಉಪಯೋಗಿಸಿ ಕೊಂಡರೂ ಅವರು ಮಹತ್ತರವಾದ ಸಾರ್ವಜನಿಕರ ಟೀಕೆಗಳಿಗೆ ಒಳಗಾಗುತ್ತಾರೆ. ಇವತ್ತು ಸಾರ್ವ ಜನಿಕರು ಎಂತಹವರೇ ಇರಲಿ, ಕೈಗಾರಿಕೆಯನ್ನು ನಡೆಸಲಿ, ದೊಡ್ಡ ವ್ಯಾಪಾರಸ್ಥರಾಗಿರಲಿ, ದೊಡ್ಡ ಎಸ್ಟೇಟ್ ಮಾಲೀಕರಾಗಿರಲಿ ಅವರು ಸಾರ್ವಜನಿಕರ ಟೀಕೆಗೆ ಒಳಗಾಗುವುದಿಲ್ಲ. ಅವರು ಸರ್ಕಾರಿ ಜಾಗ ವನ್ನು ಅಕ್ರಮವಾಗಿ ಪಡೆದು ಕಾಫಿ ತೋಟವನ್ನು ಮಾಡಿರಲಿ, ಅವನು ಯಾವ ಜಿಲ್ಲೆಯವನೇ ಆಗಿರಲಿ, ಚಿಕ್ಕಮಗಳೂರಿನವರೇ ಆಗಿರಲಿ, ಅಥವಾ ಬೇರೇ ಆಗಿರಲಿ ಆತ ೧೦೦ ಎಕರೆ, ೫೦೦ ಎಕರೆ ಅಥವಾ ೧,೦೦೦ ಎಕರೆ ಸರ್ಕಾರಿ ಜಾಗಕ್ಕೆ ಬೇಲಿ ಹಾಕಿಕೊಂಡು ಕಾಫಿ ತೋಟ ಮಾಡಿಕೊಂಡಿದ್ದರೂ ಸಹ ಅದನ್ನು ಯಾರೂ ಇಂದು ಸರ್ಕಾರದ ಗಮನಕ್ಕೆ ಸಾರ್ವಜನಿಕರ ಗಮನಕ್ಕೆ ತರುವುದಕ್ಕೆ ಪ್ರಯತ್ನಪಡುವುದಿಲ್ಲ. ಆದರೆ ಇಂದು ಯಾರೇ ಮಂತ್ರಿಯಾಗಿರಲಿ, ಅಥವಾ ಎಂ.ಎಲ್.ಎ ಆಗಿರಲಿ, ಅವರ ಕ್ಷೇತ್ರದಲ್ಲಿಯಾಗಲಿ, ಅಥವಾ ಇನ್ಯಾವುದೋ ಭಾಗದಲ್ಲಿಯಾಗಲಿ ಆತ ಒಂದು ೧೦ ಎಕರೆ ಜಾಗವನ್ನು ನ್ಯಾಯಯುತವಾಗಿ ವ್ಯವ ಸಾಯ ಮಾಡಿಕೊಂಡಿದ್ದರೂ ಅದು ಮಹತ್ತರವಾದ ಸಾರ್ವಜನಿಕರ ಟೀಕೆಗೆ ಒಳಗಾಗುವ ಪರಿಸ್ಥಿತಿ

ಇವತ್ತು ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಇದೆ. ಇವತ್ತು ಯಾವ ರಾಜಕೀಯ ವ್ಯಕ್ತಿಯೇ ಆಗಲಿ, ಅವನು ಆಳುವ ಪಕ್ಷದವನಾಗಿರಲಿ, ವಿರೋಧ ಪಕ್ಷದವನಾಗಿರಲಿ ಅಥವಾ ಯಾರೇ ಆಗಲಿ ಇವತ್ತು ಈ ಟೀಕೆಯನ್ನು ಅನುಭವಿಸುತ್ತಿರುವುದನ್ನು ನೋಡುತ್ತಿದ್ದೇವೆ. ನ್ಯಾಯಯುತವಾಗಿ, ಕಾನೂನು ಬದ್ಧವಾಗಿ ಒಬ್ಬ ಮಂತ್ರಿ ಸಾಲ ಪಡೆದು ವ್ಯಾಪಾರ ಮಾಡಿದರೆ ಅದಕ್ಕೆ ಸಾಕಷ್ಟು ಇಲ್ಲದ್ದನ್ನು ಸೇರಿಸಿ ಸಣ್ಣ ಸಣ್ಣ ಪತ್ರಿಕೆಗಳವರು ಬರೆದು ಟೀಕೆ ಮಾಡುತ್ತಾರೆ. ಅದು ನ್ಯಾಯಯುತವಾಗಿದ್ದರೂ ಅನಾವಶ್ಯಕವಾಗಿ ಮಂತ್ರಿಗಳಾದ ತಪ್ಪಿಗೋಸ್ಕರ ಅದನ್ನು ಹೊರಬೇಕಾಗುತ್ತದೆ. ಇವತ್ತು ನಾವು ವಿರೋಧ ಪಕ್ಷದಲ್ಲಿರಬಹುದು, ನಾಳೆ ಆಡಳಿತ ಪಕ್ಷದವರಾಗಿಬಹುದು. ಆದ್ದರಿಂದ ಈ ವಿಷಯವನ್ನು ಕೂಲಂಕಷವಾಗಿ ನೋಡಬೇಕಾಗುತ್ತದೆ. ಇವತ್ತು ಒಬ್ಬ ಸಾರ್ವಜನಿಕ ದೊಡ್ಡ ಎಸ್ಟೇಟ್, ದೊಡ್ಡ ಬಂಗಲೆ, ಕಾರು, ದೊಡ್ಡ ಕಾರ್ಖಾನೆ ಇವುಗಳನ್ನು ಅವನು ಎಷ್ಟೇ ಅಕ್ರಮವಾಗಿ, ಅನ್ಯಾಯವಾಗಿ ಮಾಡಿದ್ದರೂ ಕೂಡ ಅದನ್ನು ಸಾರ್ವಜನಿಕರ ಗಮನಕ್ಕೆ ತರುವುದಕ್ಕೆ ಯಾವ ಒಂದು ಏಜೆನ್ಸಿಯೂ ನಮ್ಮ ರಾಜ್ಯದಲ್ಲಿ ಇಲ್ಲ. ಇದು ಅನೇಕ ತರಹ ಬೆಳೆಯುತ್ತಿದೆ.

೩–೩೦ ಪಿಎಂ

ಆದುದರಿಂದ ಮಂತ್ರಿಗಳ ಅವರ ಸ್ವಂತ ಅನುಕೂಲವಾಗುವಾಗ ಮತ್ತು ಅವರ ರಕ್ಷಣೆ ಆಗುವಾಗ ಎಲ್ಲಾ ದೃಷ್ಟಿಯಿಂದ ಈ ಒಂದು ಸಾಲವನ್ನು ಕೊಡುವಂಥಾದ್ದನ್ನು ಕೈಬಿಡುವುದು ಒಳ್ಳೆಯದು. ಏಕೆಂದರೆ, ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ, ಮತ್ತೆ ಎಲ್ಲಾ ಸಾಮಾನುಗಳ ಬೆಲೆಗಳು ಏರಿ ಗಗನಕ್ಕೆ ಮುಟ್ಟುತ್ತಿವೆ. ಅದಕ್ಕೆ ಕಾರಣಗಳನ್ನು ಏನಾದರೂ ಕೊಡಬಹುದು. ಇನ್‌ಫ್ಲೇಷನ್ ಕಾರಣ ಕೊಡಬಹುದು, ಸಾಕಷ್ಟು ಬಂದಿಲ್ಲ ಎಂದು ಹೇಳಬಹುದು. ಮನೆಯಲ್ಲಿರತಕ್ಕ ಪ್ರತಿಯೊಬ್ಬ ಹೆಣ್ಣು ಮಗಳನ್ನು ಕೇಳಿದರೂ ಸಾಮಾನುಗಳ ಬೆಲೆ ಇಷ್ಟರಮಟ್ಟಿಗೆ ಏರುತ್ತಿದೆ, ನಾವು ಎಲ್ಲಿಗೆ ಹೋಗಿ ಮುಟ್ಟುತ್ತೇವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಾರ್ಕೆಟ್ಟಿಗೆ ಹೋಗಿ ಒಂದು ನಿಂಬೆಹಣ್ಣು ತೆಗೆದುಕೊಳ್ಳಬೇಕಾದರೆ ಅದಕ್ಕೆ ಇವತ್ತು ೮೦ ಪೈಸೆ ೯೦ ಪೈಸೆ ಕೊಡಬೇಕಾದಂಥ ಪರಿಸ್ಥಿತಿ ಬಂದಿದೆ. ಇವತ್ತಿನದಿವಸ ಹಣಕಾಸಿನ ಪರಿಸ್ಥಿತಿ ಬಹಳ ಮುಗ್ಗಟ್ಟಿನಲ್ಲಿದೆ. ಇದರ ಬಗ್ಗೆ ಇವತ್ತು ಸದನದಲ್ಲಿ ಚರ್ಚೆಯಾಗಿ ನಾಳೆದಿವಸ ಪತ್ರಿಕೆಗಳಲ್ಲಿ ಮತ್ತು ರೇಡಿಯೋನಲ್ಲಿ ಈ ವಿಷಯ ಅಂದರೆ ಮಂತ್ರಿಗಳಿಗೆಲ್ಲಾ ಮನೆಕಟ್ಟಿಕೊಳ್ಳಲಿಕ್ಕೆ ಬಡ್ಡಿ ಇಲ್ಲದಂತೆ ೮೦ ಸಾವಿರ ರೂಪಾಯಿಗಳ ಸಾಲವನ್ನು ಕೊಡಲಿಕ್ಕೆ ಸರ್ಕಾರದಿಂದ ವಿಧಾನಸಭೆಯಲ್ಲಿ ಮಂಡನೆ ಎಂದು ಪ್ರಧಾನವಾಗಿ ಬರುತ್ತದೆ, ಬಂದರೆ ಇದರಿಂದ ಅವರಿಗೇ ತಿರುಗುಬಾಣವಾಗುವಂತಹ ಪರಿಸ್ಥಿತಿ ಬರಬಹುದು. ಮಂತ್ರಿ ಆದಮಾತ್ರಕ್ಕೆ ಏನೋ ಅವರ ಹಣೆ ಬರಹ ಬರೆದಿದ್ದರೆ ಅಥವಾ ಹಿಂದಿನ ಆಸ್ತಿ ಇದ್ದರೆ ಬೇರೆ ರೀತಿಯಲ್ಲಿ ಮನೆ ಕಟ್ಟಿಕೊಳ್ಳುತ್ತಾರೆ. ಆದರೆ ಮಂತ್ರಿಯಾಗಿರುವವರಿಗೆ ಸರ್ಕಾರದ ಹಣದಿಂದ ಮನೆ ಕಟ್ಟಿಕೊಳ್ಳಲು ಅಡ್ವಾನ್ಸ್ ಕೊಡುವಂಥ ಪರಿಸ್ಥಿತಿ ಏನಿದೆ ಇದು ಸೂಕ್ತವಲ್ಲ. ಏಕೆಂದರೆ, ಮಂತ್ರಿ ಹುದ್ದೆ ಪರ್ಮನೆಂಟ್ ಅಲ್ಲ. It is very very temporary appointment–purely temporary. ಈಗ ನನಗೆ ಅನುಭವವಾಗಿದೆ. ನಾನು ಮಂತ್ರಿಯಾಗಿದ್ದೆ, ಆಮೇಲೆ ನನ್ನನ್ನು ಸರ್ಕಾರದಿಂದ ವಜಾ ಮಾಡಿದರು. ನಂತರ ೧೫ ದಿವಸಗಳಲ್ಲಿ ಮನೆ ಖಾಲಿ ಮಾಡಬೇಕು ಎಂದು ಇದೆ. ಕೆಲವರಿಗೆ ಮನೆಗಳಿತ್ತು, ಹೋದರು, ಆದರೆ ನಾವು ಎಲ್ಲಿಗೆ ಹೋಗುವುದು. ಗಂಡ ಹೆಂಡತಿ, ಮಕ್ಕಳು ಇರತಕ್ಕಂಥ ಒಂದು ಸಂಸಾರ ೧೫ ದಿವಸಗಳಲ್ಲಿ ಮನೆ ಖಾಲಿ ಮಾಡಿ ಈ ಬೆಂಗಳೂರಿನಲ್ಲಿ ಬೇರೆ ಕಡೆಗೆ ಹೋಗಬೇಕು ಅಂದರೆ ಹೇಗೆ ಸಾಧ್ಯ. ಆಗ ನಾನು ಪುನಃ ಎಲೆಕ್ಷನ್‌ನಲ್ಲಿ ನಿಂತು ಗೆದ್ದುಬಂದು ಮಂತ್ರಿಯಾದರೆ ೧೫ ದಿವಸ ಇರುವುದನ್ನು ಎರಡು ತಿಂಗಳಾದರೂ ಮಾಡಬೇಕು ಎಂದು ಅಂದುಕೊಂಡೆ. ಅದೇ ರೀತಿ ಗೆದ್ದು ಬಂದೆ. ಮೊದಲನೆಯದಾಗಿ ಕ್ಯಾಬಿನೆಟ್ ಸೇರಿದಾಗ ೧೫ ದಿವಸ ಇರುವುದನ್ನು ತೆಗೆದು ಎರಡು ತಿಂಗಳು ಮಾಡಿ ಎಂದು ಹೇಳಿದೆ. ನನಗೆ ಮಂತ್ರಿಮಂಡಲದಿಂದ ಇಷ್ಟು ಬೇಗ ಹೊರಗೆ ಬರುತ್ತೇನೆಂದು ಗೊತ್ತಿರಲಿಲ್ಲ, ಈ ಸಾರಿ ಹೊರ ಬಂದ ಮೇಲೆ ಎರಡು ತಿಂಗಳ ಸಮಯ ಸಿಕ್ಕಿದೆ. ಅಷ್ಟರಲ್ಲಿ ರೆಂಟ್ ಕಂಟ್ರೋಲಿಗೆ ಬರೆದು ಮನೆ ಸಿಗುವುದಕ್ಕೆ ಅನುಕೂಲವಾಯಿತು. ಮಂತ್ರಿ ಪದವಿ ಬಿಟ್ಟಮೇಲೆ ೨೫ ದಿವಸ ಹೋಟೆಲಿನಲ್ಲಿ ಸಂಸಾರ ಸಮೇತ ಇದ್ದೆ. ಆದರಿಂದ ನನಗೇನೂ ಬೇಜಾರು ಆಗಲಿಲ್ಲ. ದೇವರ ದಯೆಯಿಂದ ನಾನು ಸಾರ್ವಜನಿಕ ಜೀವನಕ್ಕೆ ಬಂದಮೇಲೆ ಎಂ ಎಲ್. ಎ. ಆಗಿ, ಪಾರ್ಟಿ ಸೆಕ್ರೆಟರಿಯಾಗಿ, ಮಂತ್ರಿಯಾಗಿ ಬಂದಮೇಲೆ ಸಾರ್ವಜನಿಕ ಜೀವನದಲ್ಲಿ ಸಣ್ಣ ತಪ್ಪನ್ನು ಹೊರಿಸುವಂಥ ಕೆಲಸವನ್ನು ಮಾಡಿಲ್ಲ. ಕೇಂದ್ರದಲ್ಲಿ ಜನತಾ ಸರ್ಕಾರ ಬಂದಮೇಲೆ ಅನೇಕ ಜನರ ವಿರುದ್ಧ ಕಮಿಷನ್‌ಗಳು ಸ್ಥಾಪನೆಯಾಗಿದ್ದರೂ, ಶ್ರೀಮತಿ ಇಂದಿರಾಗಾಂಧಿಯವರಿಗೆ, ಶ್ರೀ ಸಂಜಯ

ಗಾಂಧಿಯವರಿಗೆ ಗುಂಡೂರಾವ್ ಬೇಕಾದ ವ್ಯಕ್ತಿ ಎಂದು ಎಲ್ಲರಿಗೂ ಗೊತ್ತಿದ್ದರೂ, ಗುಂಡೂರಾವ್ ಬುಡ ಸಮೇತ ಹುಡುಕಿದರೂ ನನ್ನ ಸಾರ್ವಜನಿಕ ಜೀವನದಲ್ಲಿ ಒಂದು ಪೈಸೆಯಷ್ಟು ಸಣ್ಣ ತಪ್ಪನ್ನು ಹೊರಿಸುವಂಥಾದ್ದನ್ನು ನಾನೇನೂ ಮಾಡಿಲ್ಲ ಎನ್ನತಕ್ಕಂಥ ಹೆಮ್ಮೆ ನನಗೆ ಇದೆ. ಇದನ್ನು ನಾನು ನಿಜವಾಗಿಯೂ ಹೇಳುತ್ತಿದ್ದೇನೆ. I am a friend of Sri Sanjay Gandhi and I will be his good friend. But I am not a friend of power. Whether Sri Sanjay Gandhi is the son of ex-Prime Minister or any body else, he is my good friend. It is my habit to promote friendship. With all. ಆದುದರಿಂದ ಸಾರ್ವಜನಿಕ ಜೀವನದಲ್ಲಿ ನಾವು ಎಷ್ಟೇ ಸತ್ಯವಾಗಿ ನಡೆದುಕೊಂಡರೂ ಅಪವಾದ ಹೊರಿಸುತ್ತಾರೆ. ಅನೇಕರು ತಪ್ಪು ಮಾಡಿರುವುದಿಲ್ಲ, ಅವರನ್ನು ಕೋರ್ಟಿಗೆ ಕರೆಯುತ್ತಾರೆ. ಪೇಪರಿನಲ್ಲಿ ಪಬ್ಲಿಸಿಟಿ ಅವರ ಬಗ್ಗೆ ಬರುತ್ತದೆ. ಈ ಎಲ್ಲಾ ದೃಷ್ಟಿಯಿಂದ ಹೇಳುವುದಾದರೆ ಈ ೮೦ ಸಾವಿರ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದೇ ಆದರೆ ಮುಂದೆ ದೊಡ್ಡ ಆಪಾದನೆಗೆ ಗುರಿಯಾಗುವಂಥ ಪರಿಸ್ಥಿತಿ ಸರ್ಕಾರದ ಮಂತ್ರಿಗಳಿಗೆ ಬರುತ್ತದೆ. ಈ ಬಿಲ್ಲನ್ನು ತಂದಂಥ ಮಾನ್ಯ ಮುಖ್ಯ ಮಂತ್ರಿಗಳು ಸಾಕಷ್ಟು ಅಪವಾದವನ್ನು ಹೊಂದಬೇಕಾಗುತ್ತದೆ. ಯಾವ ಪಕ್ಷದವರೇ ಮುಖ್ಯ ಮಂತ್ರಿಗಳಾಗಿರಲಿ, ಮಂತ್ರಿಗಳಾಗಿರಲಿ, ಮುಖ್ಯಮಂತ್ರಿ ಸ್ಥಾನ, ಮಂತ್ರಿಗಳಸ್ಥಾನ ಬಹಳ ಮುಖ್ಯವಾದಂಥಾದ್ದು. ಏಕೆಂದರೆ, ಸಾರ್ವಜನಿಕರು ನಂಬಿಕೆಇಟ್ಟು, ವಿಶ್ವಾಸ ಇಟ್ಟು ನಮ್ಮನ್ನು ಅಂದರೆ ೨೨೬ ಜನರನ್ನು ಆರಿಸಿ ಕಳಿಸಿದಂಥ ಈ ಸಭೆಯಲ್ಲಿ ಬಹುಮತದಿಂದ ಆರಿಸಿದಂಥ ಮಂತ್ರಿಮಂಡಲ, ಅದು ಒಳ್ಳೆಯ ಸರ್ಕಾರವಾಗಿ ಜನರಿಗೆ ರಕ್ಷಣೆಯನ್ನು ಕೊಟ್ಟು, ಸಾರ್ವಜನಿಕರ ಮೆಚ್ಚುಗೆಗೆ ಒಳಗಾಗಿ ಆಡಳಿತವನ್ನು ನಡೆಸುವಂಥಾದ್ದು ಅದರ ಜವಾಬ್ದಾರಿ. ಅಂಥಾದ್ದರಲ್ಲಿ ಈ ಒಂದು ಸಾಲವನ್ನು ಕೊಡತಕ್ಕಂಥ ಪ್ರಯತ್ನಮಾಡಿ ಮಂತ್ರಿಮಂಡಲ ಒಂದು ಕೆಟ್ಟ ಹೆಸರನ್ನು ತೆಗೆದುಕೊಳ್ಳುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ೮೦ ಸಾವಿರ ರೂಪಾಯಿಗಳ ಸಾಲವನ್ನು ಕೊಡತಕ್ಕಂಥ ಅಮೆಂಡ್‌ಮೆಂಟನ್ನು ಏನು ತಂದಿದ್ದಾರೆ, ಅದನ್ನು ವಾಪಸ್ ತೆಗೆದುಕೊಂಡರೆ ಒಳ್ಳೆಯದು. In the interest of the State, in the interest of the Government and in the interest of everybody, they should withdraw this Bill and under no circumstances this Bill will be allowed to be passed. ಬಹುಶಃ ಇದಕ್ಕೆ ಸರ್ಕಾರ ಒಪ್ಪುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನಾನು ಯಾವುದೇ ಪಕ್ಷದ ಮೇಲೆ ಹೂತನಾಡಿಲ್ಲ, ಅದಕ್ಕೆ ಕಳಂಕ ತರಬೇಕು ಎನ್ನುವ ರೀತಿಯಲ್ಲಿ ನಾನು ಹೇಳಲಿಲ್ಲ ಇರತಕ್ಕಂಥ ನಿಜಸ್ಥಿತಿಯನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಆ ರೀತಿ ಕೊಡಬೇಕು ಎಂದು ಇದ್ದರೆ ಹೌಸಿಂಗ್ ಬೋರ್ಡ್ ಸಾಲ ಕೊಡಬಹುದು, ನಾನು ಇದ್ದಾಗ ಆ ಒಂದು ಸಲಹೆ ಇತ್ತು. ಅವರಿಗೆ ಸರ್ಕಾರದಿಂದ ನೇರವಾಗಿ ಆಡ್ವಾನ್ಸ್ ಕೊಡುವುದಕ್ಕೆ ಬದಲಾಗಿ ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ ಮುಂತಾದ ಸಂಘಸಂಸ್ಥೆಗಳ ಮೂಲಕ ಸಾಲ ತೆಗೆದುಕೊಳ್ಳಲು ಪ್ರಾವಿಜನ್ ಮಾಡಿಕೊಟ್ಟರೆ ಅವರು ಎಲ್ಲವನ್ನೂ ನೋಡುತ್ತಾರೆ. ಅವರ ಆದಾಯವೇನು, ಅವರ ಉತ್ಪತ್ತಿ ಇಷ್ಟು ಎಷ್ಟು ಹಣ ವಾಪಸ್ ಕೊಡಬಲ್ಲ, ಅವರ ಕುಟುಂಬದವರಿಗೆ ಎಷ್ಟು ಆಸ್ತಿಇದೆ, ಇದೆಲ್ಲಾ ನೋಡಿ ಲೀಗಲ್ ಒಪಿನಿಯನ್ ತೆಗೆದುಕೊಂಡು ಇನ್ನಿತರ ರೆವಿನ್ಯು ದಾಖಲೆಗಳ ಪಟ್ಟಿ ಮುಂತಾದುವನ್ನೆಲ್ಲಾ ಹುಡುಕಿ ಸಾಲ ಕೊಡುತ್ತಾರೆ. ಅದನ್ನು ವಾಪಸ್ ಕೊಡಲಿಕ್ಕೆ ಅನುಕೂಲವಾಗುತ್ತದೋ ಎನ್ನುವುದನ್ನೆಲ್ಲಾ ನೋಡಿ ಸಾಲ ಕೊಡುತ್ತಾರೆ. ಒಂದು ವಿಚಾರ ಹೇಳುವುದಾದರೆ ಇವತ್ತು ಹೌಸಿಂಗ್ ಬೋರ್ಡಿಗೆ ಕೋಟ್ಯಾಂತರ ರೂಪಾಯಿ ಸಾಲ ವಾಪಸ್ ಬಂದಿಲ್ಲ. ಈಗ ಅದರ ವಿಷಯ ಬೇಡ. ಆ ವಿಷಯ ಬಂದಾಗ ಮಾತನಾಡುತ್ತೇನೆ. ಆದೊಂದು ಭಾರಿ ಸಮಸ್ಯೆ ಆದರೂ ಸಹ ಯಾವುದಾದರೂ ಪಬ್ಲಿಸ್ಸಿ ಮೂಲಕ ಅವರಿಗೆ ಹಣ ಕೊಡಬೇಕೇ ಹೊರತು ಸರ್ಕಾರ ಮಂತ್ರಿಗಳಿಗಾಗಲೀ, ಶಾಸನಸಭಾ ಸದಸ್ಯರುಗಳಿಗಾಗಲೀ ಯಾರಿಗೇ ಆಗಲಿ ಈ ರೀತಿ ಹಣ ಕೊಡುವಂಥಾದ್ದು ಸರಿಯಲ್ಲ. ಪೆರ್ಟಿಕ್ಯುಲರ್ ಆಗಿ ಈ ಸಾಲ ಕೊಡತಕ್ಕಂಥ ಅಮೆಂಡ್‌ಮೆಂಟನ್ನು ವಾಪಸ್ ತೆಗೆದುಕೊಳ್ಳಬೇಕು. ಮತ್ತೆ ಪೆಟ್ರೋಲ್ ಕ್ರಯ ಜಾಸ್ತಿಯಾಗಿರುವುದರಿಂದ ಈ ರೇಟನ್ನು ಜಾಸ್ತಿ ಮಾಡಿದ್ದಾರೆ. ಅದು ಇರಲಿ. ನಾನು ಹೇಳಿದ ಎಲ್ಲಾ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಆ ರೀತಿ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಈ ಬಿಲ್ಲಿನ ಮೊದಲನೇ ಭಾಗಕ್ಕೆ ಅಂದರೆ ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವುದರಿಂದ ರೇಟನ್ನು ಜಾಸ್ತಿಮಾಡಿರುವುದಕ್ಕೆ ಒಪ್ಪಿಗೆ ಕೊಟ್ಟು ಎರಡನೇ ಭಾಗವನ್ನು ಅಂದರೆ ಸಾಲವನ್ನು ಕೊಡತಕ್ಕಂಥಾದ್ದನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.(ಬಸವನಗುಡಿ):— ಮಾನ್ಯ ಸಭಾಧ್ಯಕ್ಷಣಿಯರೇ, ಇಂದು ನಮ್ಮ ಮುಂದೆ ಇರತಕ್ಕಂಥ ಪಂಸೂದೆಯಲ್ಲಿ ಎರಡು ಮುಖ್ಯವಾದ ವಿಚಾರಗಳಿವೆ. ಒಂದನೆಯದು ಮಂತ್ರಿಗಳು ಉಪಯೋಗಿಸತಕ್ಕಂಥ ವಾಹನಗಳಿಗೆ ಈಗ ಟಿ.ಎ.ಒಂದು ಕಿಲೋಮೊಟರ್‌ಗೆ ೭೫ ಪೈಸೆ ಇದ್ದು ದನ್ನು ಪೆಟ್ರೋಲ್ ಬೆಲೆ ಏರಿರುವುದರಿಂದ ಒಂದು ರೂಪಾಯಿ ಮಾಡತಕ್ಕಂಥಾದ್ದು. ಎರಡನೆಯದು. ಮಂತ್ರಿಗಳಿಗೆ ಮನೆ ಕಟ್ಟಿಕೊಳ್ಳುವುದಕ್ಕೋಸ್ಕರ ೮೦ ಸಾವಿರ ರೂಪಾಯಿಗಳವರೆಗೆ ಸಾಲ ಕೊಡತಕ್ಕಂ ಥಾದ್ದು. ಈ ಎರಡು ವಿಚಾರಗಳು ಈ ಪಂಸೂದೆಯಲ್ಲಿದೆ. ಮಾನ್ಯ ಗುಂಡೂರಾಯರು ಹೇಳಿದಹಾಗೆ ಈಗಾಗಲೇ ಪೆಟ್ರೋಲ್ ಬೆಲೆ ಏರಿರುವುದರಿಂದ ಸಾಧ್ಯವಾದಷ್ಟು ಸ್ವಲ್ಪ ಹೆಚ್ಚುವರಿ ರೇಟು ಮಾಡಬೇಕು. ಮೊದಲು ಒಂದು ಮೈಲಿಗೆ ೫೦ ಪೈಸೆ ಇತ್ತು, ಆಮೇಲೆ ಕಿಲೋಮೊಟರ್‌ಗೆ ೭೫ ಪೈಸೆ ಮಾಡಿದರು, ಈಗ ಒಂದು ರೂಪಾಯಿ ಮಾಡಿದ್ದೀರಿ. ಪೆಟ್ರೋಲ್ ಬೆಲೆ ಏರಿರುವುದಕ್ಕಿಂತ ಈಗ ಹೆಚ್ಚುವರಿ ಮಾಡಿರತಕ್ಕಂಥ ರೇಟು ಏನಿದೆ ಅದು ಜಾಸ್ತಿಯಾಗಿದೆ. ಈಗ ಹಾಕಿದ್ದೀರಿ ಚೌಕಾಸಿ ಮಾಡುವುದು ಬೇಡ. ಆದರೆ ಪೆಟ್ರೋಲ್ ಉಪಯೋಗಿಸತಕ್ಕಂಥಾದ್ದನ್ನು ಕಡಿಮೆ ಮಾಡುವುದು ಅತೀ ಅಗತ್ಯವಾಗಿದೆ.

ಇದು ಏತಕ್ಕೆ ಆಗುತ್ತದೆ ಎಂದರೆ ಒಂದು ಹಣಕಾಸಿನ ಪರಿಸ್ಥಿತಿ ಜೊತೆಗೆ ಈ ಪೆಟ್ರೋಲ್ ಅಭಾವ ವಿರುವುದರಿಂದ ಸಾಧ್ಯವಾದಷ್ಟು ಕೂಡ ಪೆಟ್ರೋಲ್ ಉಪಯೋಗಿಸತಕ್ಕಂಥದ್ದು ಕಡಿಮೆ ಮಾಡಬೇಕಾಗಿದೆ. ಈಗಾಗಲೇ ಮಾನ್ಯ ವಿರೋದ ಪಕ್ಷದ ನಾಯಕರು ಆದ ಶ್ರೀ ಗುಂಡೂರಾವ್ ರವರು ಕೆಲವೊಂದು ವಿಚಾರಗಳನ್ನು ಹೇಳಿದ್ದಾರೆ. ನಾನಾದರೂ ಹೇಳತಕ್ಕಂಥದ್ದು ಇಷ್ಟೇ ಅನೇಕ ಸಾರಿ ಒಬ್ಬ ಮಂತ್ರಿಗಳು ಬೇರೆ ಬೇರೆ ಕಾರುಗಳಲ್ಲಿ ಒಂದೇ ಕಡೆಗೆ ಹೋಗುತ್ತಾರೆ. ಅದರ ಬದಲು ಎಲ್ಲಾ ಸೇರಿ ಒಟ್ಟಿಗೆ ಒಂದೇ ಕಾರಿನಲ್ಲಿ ಹೋದರೆ ಆಗ ಎಷ್ಟೋ ಪೆಟ್ರೋಲ್ ಉಳಿತಾಯವಾಗುತ್ತದೆ. ಮತ್ತೆ ಕೆಲವು ಸಾರಿ ಬಸ್ಸಿನಲ್ಲಿ ಪ್ರಯಾಣ ಮಾಡಿದರೆ ಸಾರ್ವಜನಿಕರ ತೊಂದರೆ ಏನು ಎಂಬುದು ಗೊತ್ತಾಗುತ್ತದೆ. ಆಗ ಪೆಟ್ರೋಲನ್ನು ಉಳಿಸಿದ ಹಾಗೆ ಆಗುತ್ತದೆ. ಇದನ್ನು ನಾನು ಏತಕ್ಕೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ ಎಂದರೆ ಒಂದು ಕಡೆ ಮಂತ್ರಿಗಳು ಪ್ರವಾಸ ಹೋಗುತ್ತಾರೆ ಎಂದರೆ ಅವರ ಹಿಂದುಗಡೆ ಅನೇಕ ಜೀಪುಗಳು ಕಾರು ಗಳು ಹೋಗುವುದರಿಂದ ಅನಾವಶ್ಯಕವಾಗಿ ಪಟ್ರೋಲ್ ಖರ್ಚಾಗುತ್ತದೆ. ಆದುದರಿಂದ ಇದರ ಬಗೆ ಸಮಗ್ರವಾಗಿ ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಕೂಡ ಪೆಟ್ರೋಲ್ ಉಪಯೋಗಿಸತಕ್ಕಂಥದ್ದನ್ನು ಕಡಿಮೆ ಮಾಡಬೇಕೆಂದು ಹೇಳಿ ಒತ್ತಾಯ ಪೂರ್ವಕವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

MADAM DEPUTY SPEAKER.—I have to bring to the notice of the House that Government is bringing in an amendment.So, the member may restrict his remarks only to the allowances portion.

SRI A. LAKSHMI SAGAR —The day before yesterday, I gave amend -ment in respect of Clause 13 (a) which relates to advance of eighty thousand rupees. If the Government is agreeable to my amendment, most of the discussion would be obviated.

SRI K. H. RANGANATH.—The amendment must be circulated.

SRI S. R. BOMMAI.—Sri A. Lakshmisagar and myself have given notice of amendment the day before yesterday. Let it be accepted by the Government. Circulation is not our job. The day before yesterday we have moved it. It is to be put to voting. If the Government accepts it, there is no question of putting it for voting. Voting can be avoided and also further discussion. we are really glad that Government have appreciated the stand of the opposition.

ಶ್ರೀ ಟಿ.ಆರ್. ಶಾಮಣ್ಣ.—ಸ್ಪೆಸಿಫಿಕ್ ಆಗಿ ಯಾವುದೇ ಅಮೆಂಡ್‌ಮೆಂಟ್ ನಮ್ಮ ಮುಂದೆ ಇಟ್ಟಿಲ್ಲದೇ ಇರುವುದರಿಂದ ಸ್ವಲ್ಪ ಸೂಕ್ಷ್ಮವಾಗಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಈ ರೀತಿ ತಾವು ೮೦ ಸಾವಿರ ರೂಪಾಯಿಗಳನ್ನು ಮನೆಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ, ನಮ್ಮನ್ನು

ಮಂತ್ರಿಯನ್ನಾಗಿ ಮಾಡಿ ನಮ್ಮನ್ನು ಮಂತ್ರಿಯನ್ನಾಗಿ ಮಾಡಿ ಎನ್ನತಕ್ಕ ಪ್ರಜರ್ ತಮ್ಮ ಮೇಲೆ ಬೀಳು-ತ್ತದೆ. ಇದರಿಂದ ತಮಗೇ ಹೆಚ್ಚಿನ ಕಷ್ಟವಾಗುತ್ತದೆ. ಈಗಾಗಲೇ ಮಂತ್ರಿಗಳಿಗೆ ಹೆಚ್ಚಿನ ಪ್ರಿವಿಲೇಜ್ ಇರುವಾಗ ಇನ್ನು ಹೆಚ್ಚಿನ ಪ್ರಿವಿಲೇಜ್‌ಗಳನ್ನು ಮಾಡಿಕೊಟ್ಟರೆ ನಿಮಗೇ ತೊಂದರೆಯಾಗುತ್ತದೆ. ಆದುದ ರಿಂದ ಇದನ್ನು ೪೦,೦೫೫ ಸಾವಿರಗಳಿಗೆ ಮಾಡುವುದು ಉತ್ತಮ. ಆದುದರಿಂದ ಇದನ್ನು ಒಪ್ಪತಕ್ಕಂಥದ್ದು ಅಲ್ಲ ಸಾಧ್ಯವಾದರೆ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

SRI K. H. RANGANATH.—Sri T. R. Shamanna has accepted it in principle. His amendment is to reduce it from Rs. 80,000 to rupees Rs. 40,000 That means to say in principle, he has accepted it.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಉಪಾಧ್ಯಕ್ಷಣೀಯವರೇ, ಈ ಮಸೂದೆಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ೭೫ ಪೈಸೆಯಿಂದ ೪ ರೂಪಾಯಿಗಳಿಗೆ ಹೆಚ್ಚಿಸಿರುವುದರಿಂದ ಸರ್ಕಾರಕ್ಕೆ ಸುಮಾರು ೨ ಲಕ್ಷ ರೂಪಾಯಿಗಳು ಸರ್ಕಾರದ ಬೊಕ ಸದಿಂದ ಹೆಚ್ಚು ಖರ್ಚಾಗುತ್ತದೆಂದು ಕೊಟ್ಟಿ ದ್ದಾರೆ. ಈಗಾಗಲೇ ನಾವು ಎಂಟೂವರೆ ಲಕ್ಷ ರೂಪಾಯಿಗಳನ್ನು ಮಂತ್ರಿಗಳ ಪ್ರವಾಸಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಕೇವಲ ತೈಲಗೋಸ್ಕರವಾಗಿ ಖರ್ಚು ಮಾಡುತ್ತಿದ್ದೇವೆ. ಈಗ ಇನ್ನು ೨ ಲಕ್ಷ ರೂಪಾಯಿಗಳನ್ನು ನಾವು ಹೆಚ್ಚಿಗೆ ಖರ್ಚು ಮಾಡಬೇಕಾಗಿದೆ ಎನ್ನುವ ತಿದ್ದುಪಡಿಯನ್ನು ತಂದಿದ್ದೀರಿ. ಸ್ವಾಮಿ, ಇವತ್ತಿನ ದಿವಸ ಕೇಂದ್ರ ಸರ್ಕಾರದವರು ಇದರ ಬಗ್ಗೆ ಒಂದು ಸುತ್ತೋಲೆಯನ್ನೇ ಹೊರಡಿಸಿ ದ್ದಾರೆ, ತಮ್ಮ ಎಲ್ಲಾ ಖಾತೆಗಳಲ್ಲೂ ಒಂದು ಎಕಾನಮಿ ಡ್ರೈವ್ ಮಾಡಬೇಕು ಎನ್ನತಕ್ಕ ಒಂದು ಸುತ್ತೋಲೆ ಇರುವಾಗ, ಈ ತಿದ್ದುಪಡಿ ಏತಕ್ಕೆ ಎಂದು ಕೇಳುತ್ತೇನೆ. ಮಂತ್ರಿಗಳು ಪ್ರವಾಸ ಮಾಡ ತಕ್ಕಂಥಾದ್ದು ಗೊತ್ತೇ ಇದೆ. ಅನೇಕ ಕಡೆ ಪ್ರವಾಸ ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಪ್ರವಾಸ ಕ್ಕೋಸ್ಕರವಾಗಿ ಹೋಗುತ್ತಿದ್ದಾರೆಯೇ ವಿನಹ ಜನಗಳ ಒಂದು ಸಂಕಷ್ಟವನ್ನು ನೋಡಿ ಬಗೆಹರಿಸ ತಕ್ಕಂಥದ್ದನ್ನು ನೋಡುತ್ತಾ ಇಲ್ಲ. ತಮಗೊಂದು ಪ್ರವಾಸದ ವಿಚಾರವನ್ನು ಹೇಳುತ್ತೇನೆ. ಸುಮಾರು ೧೦, ೧೫ ದಿವಸಗಳ ಹಿಂದೆ ಹಲವಾರು ಮಂತ್ರಿಗಳವರು ಮುಖ್ಯಮಂತ್ರಿಗಳವರ ನೇತೃತ್ವದಲ್ಲಿ ನಮ್ಮ ಒಂದು ಕ್ಷೇತ್ರಕ್ಕೆ ಬಂದರು. ಮಲ್ಲೇಶ್ವರಂ ಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶಗಳನ್ನು ನೋಡಬೇಕು ಅಂತ ಹೇಳಿ ಮುಖ್ಯಮಂತ್ರಿಗಳವರ ನೇತೃತ್ವದಲ್ಲಿ ೧೨ ಕಾರುಗಳಲ್ಲಿ, ಜೀಪುಗಳಲ್ಲಿ ಮಾನ್ಯ ಶ್ರೀಕಂಠಯ್ಯ ನವರು, ಮಾನ್ಯ ಶ್ರೀ ಸುಬ್ಬಯ್ಯ ಶೆಟ್ಟಿಯವರು ಅಲ್ಲಿ ಪ್ರವಾಸ ಮಾಡಿದರು. ಆದರೆ ಅಲ್ಲಿಯೇ ಇರತಕ ಶಾಸಕರಿಗೆ ಮಾತ್ರ ಹೇಳಲಿಲ್ಲ. ಶಾಸಕರಾಗಿರತಕ್ಕ, ಅಲ್ಲಿಯ ಪ್ರತಿನಿಧಿಯಾಗಿರತಕ್ಕವರಿಗೇ ವಿಚಾರವೇ ನೆಂಬುದೇ ಗೊತ್ತಿಲ್ಲ ಏಕಾಏಕಿ ಅಲ್ಲಿಗೆ ಬಂದರು ಅಲ್ಲಿಗೆ ಬಂದಾಗ ಒಂದು ದೊಡ್ಡ ಮೆರವಣಿಗೆ ಮಾಡಿದರು ಮತ್ತೆ ಅಲ್ಲಿಯೇ ಸ್ಪಾಟ್‌ನಲ್ಲಿಯೇ ಬಂದು ಆರ್ಡರ್ ಮಾಡಿದರು, ಇದು ಇವರು ಮಾಡತಕ್ಕ ಪ್ರವಾಸವೇ ಆಂತ ಕೇಳುತ್ತೇನೆ.

೪-೦೦ ಪಿ.ಎಂ.

ನಾನೇ ಔಚಿತ್ಯದ ದೃಷ್ಟಿಯಿಂದ ಒಂದು ಕಾಗದವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಿದ್ದೇನೆ. ಪಕ್ಕದ ಕ್ಷೇತ್ರದ ಮಾನ್ಯ ಮಳ್ಳೂರು ಆನಂದರಾಯರು ಈಗತಾನೇ ಕರ್ನಾಟಕ ಕಾಂಗ್ರೆಸ್ಸಿಗೆ ಸೇರಿದ್ದಾರೆ, ಅವರನ್ನಾದರೆ ಜೊತೆಯಲ್ಲಿ ಕರೆದುಕೊಂಡು ಹೋದರು. ಆದರೆ ನಾನು ಆ ಕ್ಷೇತ್ರದ ಶಾಸಕನಾಗಿದ್ದರೂ ಕೂಡ ನನಗೆ ತಿಳಿಸಲಿಲ್ಲ. ನಾನು ಶಾಸಕನಾಗಿ ಆರಿಸಿ ಬಂದಿದ್ದೇನೆ, ಆನಂದರಾಯರು ಶಾಸಕರಾಗಿ ಆರಿಸಿ ಬಂದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಅದೇ ರೀತಿ ಶಾಸಕರಾಗಿಯೇ ಆರಿಸಿ ಬಂದಿದ್ದಾರೆ. ಆದರೆ ಔಚಿತ್ಯದ ದೃಷ್ಟಿಯಿಂದಲಾದರೂ ಮಾನ್ಯ ಮುಖ್ಯ ಮಂತ್ರಿಗಳು ನನಗೆ ಪತ್ರ ಬರೆಯಬೇಕಾಗಿತ್ತು. ಹೀಗೆ ನನಗೆ ತಿಳಿಸದೆ ನಮ್ಮ ಕ್ಷೇತ್ರದಲ್ಲಿ ರಾಜಕೀಯ ಮಾಡುವುದು ಸರಿಯೇ ? ಈ ಹಿಂದೆಯೇ ಮಾನ್ಯ ಮುಖ್ಯ ಮಂತ್ರಿಗಳನ್ನು ನಮ್ಮ ಏರಿಯಾಕ್ಕೆ ಬಂದು ಇನ್ಸ್‌ಪೆಕ್ಟ್ ಮಾಡಬೇಕೆಂದು ಕೇಳಿದ್ದೇನೆ. ಮಾನ್ಯ ಶ್ರೀಕಂಠಯ್ಯನವರನ್ನು ಸಹ ಬರಬೇಕೆಂದು ಕೇಳಿದ್ದೇನೆ. ಅದೇ ರೀತಿ ಮಾನ್ಯ ಸುಬ್ಬಯ್ಯ ಶೆಟ್ಟರನ್ನು ಕೂಡ ಅಲ್ಲಿರತಕ್ಕ ಸರ್ಕಾರಿ ಶಾಲಾ ಕಟ್ಟಡಗಳು ಕೆಟ್ಟು ಪರಿಸಿ ತಿಯಲ್ಲಿವೆಯೆಂದ್ದರಿಂದ ಖಂಡಿತ ಬಂದು ನೋಡಬೇಕೆಂದು ಹೇಳಿದ್ದೇನೆ. ಆದರೆ ಇದುವರೆಗೆ ಉತ್ತರವಿಲ್ಲ. ಏಕಾಏಕಿ ೪-೫ ಮಂದಿ ಮಂತ್ರಿಗಳು ಮತ್ತು ಸುಮಾರು ೧೦-೧೨ ಕಾರುಗಳಲ್ಲಿ ಅಧಿಕಾರಿಗಳು ಯಾವ ರಾಜಕೀಯ ಮಾಡುವುದಕ್ಕೆ ಬಂದಿದ್ದರು

ಎಂದು ಕೇಳುತ್ತೇನೆ. ಇಂಥ ಪ್ರವಾಸಕ್ಕೆ ಹಣ ಕೊಡಬೇಕೆ? ರಾಜಕೀಯ ಮಾಡುವ ದೃಷ್ಟಿಯಿಂದ ಮಂತ್ರಿಗಳು ಪ್ರವಾಸ ಮಾಡುತ್ತಾರೆಯೇ ಹೊರತು ಜನರ ಕಷ್ಟಗಳನ್ನು ನೋಡುವ ದೃಷ್ಟಿಯಿಂದ ಅಲ್ಲ. ಊರಿಗೆಲ್ಲ ಹೇಳುತ್ತಾರೆ, ಎಕಾನಮಿ ಮೆಷರ್ ತರಬೇಕು, ಡಿಫಿಸಿಟ್ ಬಜೆಟ್ ಬಂದು ಅಲ್ಲೋಲ ಕಲ್ಲೋಲವಾಗಿದೆ ಎಂದು. ಅರಬ್ ರಾಷ್ಟ್ರಗಳಿಂದ ಬರತಕ್ಕ ತೈಲ ಕಡಿಮೆಯಾಗಿದೆಯಾದ್ದರಿಂದ ತೈಲದ ಬೆಲೆ ಜಾಸ್ತಿಯಾಗಿದೆ, ಆದಕಾರಣ ಶೇಕಡ ೧೫ರಷ್ಟು ಕಟ್ ಮಾಡಬೇಕೆಂಬ ಸುತ್ತೋಲೆ ಬಂದಿರುವಾಗ ಇವರು ಮಾಡುತ್ತಿರುವ ಎಂಥ ಎಕಾನಮಿ ಮೆಷರ್? ಇಂಥ ಸಂದರ್ಭದಲ್ಲಿ ಏಕ್‌ದಂ ೬ ತಿಂಗಳಿಗೆ ೨ ಲಕ್ಷ ರೂಪಾಯಿಗಳನ್ನು ಜಾಸ್ತಿ ಕೇಳತಕ್ಕುದು ಖಂಡನೀಯ ಅಂದುಕೊಂಡಿದ್ದೇನೆ. ಆದ್ದರಿಂದ, ದಯವಿಟ್ಟು ಇದನ್ನು ಕೈಬಿಡಬೇಕೆಂದು ಹೇಳುತ್ತೇನೆ. ಮತ್ತು ಮಂತ್ರಿಗಳ ಸಂಖ್ಯೆಯನ್ನು ಕೂಡ ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಇಷ್ಟೊಂದು ಮಂತ್ರಿಗಳು ಏಕೆ ಬೇಕು? ಅನೇಕ ಮಂತ್ರಿಗಳಿಗೆ ಫೈಲುಗಳೇ ಹೋಗುವುದಿಲ್ಲ, ಫೈಲುಗಳನ್ನೇ ನೋಡುವುದಿಲ್ಲ, ಕಛೇರಿಗೂ ಬರುವುದಿಲ್ಲವೆಂದು ಕೇಳಿದ್ದೇನೆ. ನಾವೂ ಕೂಡ ಅವರನ್ನು ನೋಡಬೇಕೆಂದರೆ ಕಷ್ಟವಾಗುತ್ತದೆ, ಮನೆಗಳಲ್ಲಿ ಸಹ ನೋಡುವುದಕ್ಕಾಗುವುದಿಲ್ಲ, ಕಛೇರಿಗೂ ಬರುವುದಿಲ್ಲ. ಹೀಗಿರುವಾಗ ಮಂತ್ರಿಗಳ ಸಂಖ್ಯೆಯನ್ನು ಜಾಸ್ತಿ ಮಾಡುವ ಒಂದು ವದಂತಿ ಬಂದಿದೆ, ಆದ್ದರಿಂದ, ಮಂತ್ರಿಗಳ ಸಂಖ್ಯೆಯನ್ನು ಏರಿಸುವುದಕ್ಕೆ ಹೋಗದೆ ಇರತಕ್ಕ ಮಂತ್ರಿಗಳ ಸಂಖ್ಯೆಯನ್ನೆ ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಕೆಲಸ ಮಾಡದೆ ಇರತಕ್ಕವರನ್ನು ಮೊದಲು ವಜ ಮಾಡಿ. ಕೆಲವು ಮಂತ್ರಿಗಳು ಮದುವೆಗೆ, ತಿಥಿಗೆ ಹೋಗುವುದಕ್ಕೆ ಕಾರನ್ನು ತೆಗೆದುಕೊಂಡು ಹೋಗುತ್ತಾರೆ. ಈ ರೀತಿ ಕಾರು ತೆಗೆದುಕೊಂಡು ಹೋಗುವುದನ್ನು ನಿಲ್ಲಿಸಬೇಕು. ಕೇವಲ ಕರ್ತವ್ಯ ದೃಷ್ಟಿಯಿಂದ, ಜನತೆಯ ಕಷ್ಟಗಳನ್ನು ತಿಳಿದುಕೊಂಡು ಅವುಗಳನ್ನು ಪರಿಹಾರ ಮಾಡತಕ್ಕ ದೃಷ್ಟಿಯಿಂದ ಅಂಥ ಕೆಲಸಗಳಿಗೆ ಮಾತ್ರ ಹೋಗಬೇಕೆಂದು ಒತ್ತಾಯ ಮಾಡಿ ಎಂದು ಹೇಳುತ್ತೇನೆ. ಇವತ್ತು ೨ ಲಕ್ಷ ರೂಪಾಯಿಗಳನ್ನು ಏನು ಜಾಸ್ತಿ ಮಾಡಬೇಕೆಂದು ಕೇಳುತ್ತಿದ್ದೀರಿ ಅದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದೂ ಮತ್ತು ಇರತಕ್ಕದ್ದರಲ್ಲೇ ಮೆಯಿಂಟೇನ್ ಮಾಡಬೇಕೆಂದು ಹೇಳುತ್ತೇನೆ. ಮೊದಲು ೧೫ ಪರ್ಸೆಂಟ್ ಕಟ್ ಮಾಡಬೇಕೆಂದು ಏನು ಸುತ್ತೋಲೆ ಇದೆ ಅದರಂತೆ ಮಾಡಿ, ಮತ್ತು ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಿ. ಆನಂತರವೂ ಕೂಡ ಖರ್ಚು ಜಾಸ್ತಿ ಬಂದರೆ ಅದನ್ನು ಕೊಡುವುದಕ್ಕೆ ಅಡ್ಡಿ ಬರುವುದಿಲ್ಲ. ಹಾಗೆಯೇ ಕೆಲಸದ ಕಡೆ ಹೆಚ್ಚಿನ ಗಮನ ಕೊಡಬೇಕು. ತಾವು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಕೆಲಸ ಮಾಡುತ್ತಿರುವಾಗ ಮಂತ್ರಿಗಳು ಏನು ಕೆಲಸ ಮಾಡುತ್ತಿದ್ದಾರೆ. ಎಷ್ಟು ಪರಿಣಾಮಕಾರಿಯಾಗಿ ಜನಗಳ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಗಮನ ಹರಿಸುತ್ತಿದ್ದಾರೆ ಎಂಬುದನ್ನು ನೋಡುವುದಕ್ಕೆ ತಮಗೆ ಸಾಧ್ಯವಾಗುತ್ತಿಲ್ಲ. ಆ ದೃಷ್ಟಿಯಿಂದ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲವಾಗಿದೆ ದಯವಿಟ್ಟು ಮಂತ್ರಿಗಳ ಬಗ್ಗೆ ಒಂದು ಕೋಡ್ ಆಫ್ ಕಂಡಕ್ಟ್ ಮಾಡಿ, ಇಂಥ ವೇಳೆಯಲ್ಲೇ ಕಛೇರಿಗೆ ಬರಬೇಕು. ಇಷ್ಟೇ ಕಾಲ ಪ್ರವಾಸ ಹಾಕಿಕೊಳ್ಳಬೇಕು, ಹಾಗೆ ಹಾಕಿಕೊಳ್ಳಬೇಕಾದರೆ ಜನಗಳ ಸಮಸ್ಯೆ ಇರಬೇಕು, ಮದುವೆ ಮುಂಜಿಗಳಿಗೆ ಪ್ರವಾಸ ಹಾಕಿಕೊಂಡು ಹೋಗಕೂಡದು ಎಂದು ನಿರ್ಬಂಧ ಹಾಕಬೇಕು. ಹೀಗೆ ಮಾಡುವುದರಿಂದ ಜನಗಳಿಗೆ ಅನುಕೂಲವೂ ಆಗುತ್ತದೆ ಮತ್ತು ಸರ್ಕಾರಕ್ಕೆ ಹಣವೂ ಉಳಿಯುತ್ತದೆ. ಒಟ್ಟಿನಲ್ಲಿ ನೀವು ಕೇಳುತ್ತಿರುವ ಹಣದ ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ಸಲಹೆ ಮಾಡಿ, ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI A. LAKSHMI SAGAR :— In view of the acceptance of my amendment deleting the new Section 13 A, I have no moresub missions to be made on Section 13 A. I would support my friends who have advanced cogent arguments by way of criticisms against the other amendments viz., raising the allowance from 0-75 paise to Re. 1/-. Except that, I have nothing more to add.

4-00 P. M.

SRI S.R. BOMMAI :— In view of the acceptance of the amendmen moved by myself and my colleague, Sri Lakshmi Sagar, I have noth ng to add but I would suggest one thing. In Andhra, they have fixed

a particular allowance per month, *i.e.*, Rs. 3000/— or Rs. 4000/—, a definite amount so far as T. A. is concerned. If that is done, there will be restriction on the tour also. If that is done, purposeful tour could be carried out. Some definite amount or a reasonable amount, could be fixed. Now what is happening ? Many a time, for one function, four Ministers go to attend it. The Chief Minister has assured on a number of occasions that for a function, not more than one Minister should go. That is the code of conduct once announced in the House, but we find 4or5 Ministers on the platform on a simple function like the opening of a bridge or a small school building. That is how many a time the T A. and other allowonces were drawn unnecessarily. If a lumpsum amount could be fixed, it would be better. Other than this, I have nothihg to say.

ಶ್ರೀ ಹೆಚ್. ಡಿ. ದೇವೆಗೌಡ (ಹೊಳೆನರಸಿಪುರ ಕ್ಷೇತ್ರ) :— ಮಾನ್ಯ ಉಪ ಸಭಾಧ್ಯಕ್ಷರೆಯವರೆ ಸರ್ಕಾರ ತಿದ್ದುಪಡಿಯನ್ನು ತಾನೇ ಕೊಡಬೇಕೆಂದು ಇದ್ದುದು ಬದಲಾಗಿ ಮಾನ್ಯ ಸ್ನೇಹಿತರುಗಳು ಕೊಡತಕ್ಕ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತದೆಂದು ಹೇಳಿದೆ. ಅಂತೆಯೇ ಕೆಲವು ಅನವಶ್ಯಕ ವೆಚ್ಚಗಳನ್ನು ಕಡಿಮೆ ಮಾಡಬೇಕೆಂದು ಮಾನ್ಯ ಸ್ನೇಹಿತರುಗಳು ಹೇಳಿದ್ದಾರೆ. ಸರ್ಕಾರಿ ಕೆಲಸಕ್ಕೆ ತಗಲತಕ್ಕ ವೆಚ್ಚ ಏನಿದೆ ಅದನ್ನು ಕೊಡತಕ್ಕದ್ದರಲ್ಲಿ ಯಾವುದೇ ಆತಂಕ ಇರಬಾರದು. ಆದರೆ ಬಹುತೇಕವಾಗಿ ಅನೇಕ ಅನಾವಶ್ಯಕ ವೆಚ್ಚಗಳನ್ನು ಮಾಡತಕ್ಕದ್ದನ್ನು ನಾನು ನೋಡಿದ್ದೇನೆ. ಆದರೆ ಬಗ್ಗೆ ನಾನು ಬಹಳ ದೂರವಾದ ಪಾದೆಯನ್ನು ಏಂದಂದುವರಿಸುವುದಕ್ಕೆ ಹೋಗುವುದಿಲ್ಲ. ಅದು ಬಹಳ ಇದೆ. ಸರ್ಕಾರಿ ಕಾರ್ಯಕ್ರಮವೆಂದು ಹಾಕಿಕೊಂಡು ಮಂದುವೆ, ತಿಥಿಗಳಿಗೆಲ್ಲ ಹೋಗುವುದು ನಡೆದಿದೆ ಆದನ್ನೆಲ್ಲ ಚರ್ಚೆ ಮಾಡಬೇಕಾದರೆ ಇದೀ ಒಂದು ದಿವಸ ಅದಕ್ಕಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ ಸರ್ಕಾರಿ ಕಾರ್ಯಕ್ರಮಕ್ಕೆ ಎಷ್ಟು ಜನ ಬರ್ಬಾಗುತ್ತದೆ, ಅದರಿಂದ ಜನತೆಗೆ ಎಷ್ಟು ಪ್ರಯೋಜನ ವಾಗುತ್ತದೆ ಏಂಬುದನ್ನು ನೋಡಬೇಕು ಆದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುತ್ತೇನೆ, ಪರಿಸ್ಥಿತಿ ಬದಲಾವಣೆ ಆದ ಹಾಗೆ.....

ಶ್ರೀ ಹೆಚ್. ಟಿ. ಕೃಷ್ಣಪ್ಪ :— ಸರ್ಕಾರಕ್ಕೆ ಅನವಶ್ಯಕವಾಗಿ ಆಗತಕ್ಕ ವೆಚ್ಚವನ್ನು ಕಡಿಮೆ ಮಾಡ ಬೇಕು, ಸರಳ ಜೀವನ ನಡೆಸಬೇಕೆಂಬುದನ್ನು ತೋರಿಸುವ ಸಲುವಾಗಿ ಒಬ್ಬರು ಮಂತ್ರಿಗಳು ಸೈಕಲ್‌ನಲ್ಲಿ ಪ್ರಯಾಣ ಮಾಡುವುದಕ್ಕೆ ಹೊರಟರು, ಆಗ ಸೈಕ್ಲಿನ ಹಿಂದೆ ಒಂದು ಕಾರು ಮುಂದೆ ಒಂದು ಕಾರು, ಆ ರೀತಿ ಆಗುತ್ತದೆ. ಆದ್ದರಿಂದ ಬಯಮಾಡಿ ಏತಕ್ಕೆ ಅದನ್ನೆಲ್ಲ ಹೇಳುವುದಕ್ಕೆ ಹೋಗುತ್ತೀರಿ?

ಶ್ರೀ ಹೆಚ್. ಡಿ. ದೇವೆಗೌಡ:— ಸೈಕಲ್‌ನಲ್ಲಿ ಹೋದವರು ಇದ್ದಾರೆ. ಈಗ ಅದರ ಬಗ್ಗೆ ವಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅವರೂ ನಿಮ್ಮ ದಾಯಾದಿಗಳೇ. ಆದರ ಬಗ್ಗೆ ಈಗ ಏಕೆ, ಸಂದರ್ಭ ಬಂದಾಗ ಹೇಳುತ್ತೇನೆ. ಇವತ್ತು ರಾಜಕೀಯ ಒತ್ತಡದಿಂದಾಗಿ ಮಂತ್ರಿಗಳ ಸಂಖ್ಯೆ ಹೆಚ್ಚಾಗುತ್ತಿದೆ, ಅದರ ಬಗ್ಗೆ ಈಗ ಯಾವುದೇ ನಿಯಮಗಳನ್ನು ಹಾಕುವುದಕ್ಕೆ ಆಗುವುದಿಲ್ಲ. ಸಭೆಯ ಒಟ್ಟು ಬಲದ ಶೇಕಡ ೧೦ರಷ್ಟು ಎಂದು ಒಂದೆ ತತ್ವಕ್ಕೆ ಬದ್ಧರಾಗಿದ್ದೇವೆ, ಅದು ಈಗ ನಿಲ್ಲುವುದಿಲ್ಲ, ಸರ್ಕಾರ ಉಳಿಯ ಬೇಕು. ಸ್ಥಿರತೆ ಬಿಗಿರುವುದರಿಂದ ಒಂದೇ ರಾಜ್ಯಕ್ಕೆ ಅನ್ವಯವಾಗುತ್ತದೆಂದು ಭಾವಿಸಬೇಕಾಗಿಲ್ಲ. ದೇಶದ ರಾಜಕೀಯವನ್ನು ನೋಡಿರುವುದರಿಂದ ಅದನ್ನೆಲ್ಲ ಸ್ವಲ್ಪ ಗಮನಸದಲ್ಲಿಟ್ಟು ಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಶಾಸಕರಿಗೆ ಮತ್ತು ಮಂತ್ರಿಗಳಿಗೆ ಕೆಲವು ಸೌಲಭ್ಯಗಳನ್ನು ಕೊಡತಕ್ಕ ಕಾಲದಲ್ಲಿ ನಾನು ನಿಮಗೆ ಸಲಹೆ ಕೊಡುತ್ತೇನೆ, ಕಳೆದ ಸಾರಿ ಈ ಸದನದಲ್ಲಿ ಕೆಲವು ಸವಲತ್ತುಗಳನ್ನು ಕೊಟ್ಟಿದ್ದೀರಿ. ಅನೇಕ ರಾಜ್ಯಗಳಲ್ಲಿ ೧೯೫೭-೬೬ ರಿಂದಲೇ ಪೆನ್‌ಷನ್ ಕೂಡ ಕೊಟ್ಟರು, ಆದರೆ ನಮ್ಮ ರಾಜ್ಯದಲ್ಲಿ ಕೊಡಲಿಲ್ಲ. ತುರ್ತು ಪರಿಸ್ಥಿತಿ ಕಾಲದಲ್ಲಿ ಪಾರ್ಲಿಮೆಂಟ್ ಮೆಂಬರುಗಳಿಗೆ ಮತ್ತು ಶಾಸಕರಿಗೆ ವಿಶ್ರಾಂತಿ ವೇತನವನ್ನು ಕೊಟ್ಟಿದ್ದಾರೆ. ಹಾಗೆಯೇ ಕರ್ನಾಟಕ ರಾಜ್ಯದಲ್ಲಿ ಕೂಡ ಶಾಸಕರಿಗೆ ವಿಶ್ರಾಂತಿ ವೇತನವನ್ನು ಕೊಡಬೇಕೆಂದು ಹೋದ ವರ್ಷವೇ ಒಂದು ಮಸೂದೆಯನ್ನು ತಂದಿದ್ದೀರಿ. ಈ ವಿಚಾರದಲ್ಲಿ ಅವರನ್ನೇ ಅನುಕರಣೆ ಮಾಡಬೇಕೆಂದೇನೂ ಇಲ್ಲ, ಬೇರೆ ರಾಜ್ಯಗಳಲ್ಲಿ, ಲೋಕಸಭೆಯಲ್ಲಿ ಮಾಡಿರತಕ್ಕಂಥಾದ್ದನ್ನೇ

ಇಲ್ಲಿ ನಾವು ಅನುಕರಣೆ ಮಾಡಬೇಕಾದ್ದು ಇಲ್ಲ. ನಮ್ಮ ಸ್ನೇಹಿತರೊಬ್ಬರು ಇಲ್ಲಿ ಹೇಳುತ್ತಿದ್ದರು, ಪಂಜಾಬಿನಲ್ಲಿ ಎಂ.ಎಲ್.ಎ ಗಳಿಗೆ ಮನೆ ಕಟ್ಟಿಕೊಳ್ಳುವುದಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ ಎಂಬುದಾಗಿ. ನಾನು ಹೇಳುವುದೇನೆಂದರೆ ಅವರು ಮಾಡಾತ್ತಾರೆ ಎಂದು ಹೇಳಿ ನಾವು ಇಲ್ಲಿ ಅದನ್ನು ಮಾಡುವುದು ಬೇಡ, ನಾವು ಏತಕ್ಕೆ ಅವರನ್ನು ಫಾಲೋ ಮಾಡಬೇಕು ? ನಾವು ನಮ್ಮ ರಾಜ್ಯದಲ್ಲಿ ಇದನ್ನು ಮಾಡಿದ್ದೇವೆ. ಆದ್ದರಿಂದ ಇನ್ನು ಮುಂದೆ ಅವರನ್ನು ನಾವು ಫಾಲೋ ಮಾಡುವುದು ಬೇಡ ಎಂದು ಹೇಳಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷಿಣಿಯವರೇ, ಇಲ್ಲಿ ಏನೊಂದು ಅಮೆಂಡ್‌ಮೆಂಟ್‌ನ್ನು ತಂದಿದ್ದರೋ ಅದನ್ನು ಅವರು ವಾಪಸ್ಸು ತೆಗೆದುಕೊಂಡು ಬಿಟ್ಟಿದ್ದಾರೆ. ಅವರು ಏತಕ್ಕೆ ವಾಪಸ್ಸು ತೆಗೆದುಕೊಂಡರೋ ನನಗೆ ಗೊತ್ತಿಲ್ಲ. ಈ ವಿಚಾರದಲ್ಲಿ ಜನರು ಏನಾದರೂ ಅನ್ನುತ್ತಾರೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ನಿಜವಾಗಿಯೂ ಕೂಡ ಅದನ್ನು ಬೇಡ ಎಂದು ಹೇಳಿಯಾರ ಮನಸ್ಸಿನಲ್ಲೂ ಇಲ್ಲ. ನಮ್ಮ ಮನಸ್ಸಿಗೆ ಯಾವುದು ನ್ಯಾಯ ಎಂದು ತೋರುತ್ತೊ ಅದನ್ನು ಮಾಡಬೇಕು ಎಂದು ಹೇಳುವವನು ನಾನು. ಮಾನ್ಯ ದೇವೇಗೌಡರು ಹೇಳುತ್ತಿದ್ದರು ಆ ರೀತಿ ಪಂಜಾಬ್‌ನಲ್ಲಿ ಇದೆ, ಹರಿಯಾಣದಲ್ಲಿ ಇದೆ ಎಂದು, ಇಲ್ಲಿರತಕ್ಕಂಥ ಶಾಸಕರೆಲ್ಲರೂ ಹಣವಂತರು ಎಂದು ತಿಳಿದುಕೊಂಡಿದ್ದರೆ ಅದು ಬಹಳ ತಪ್ಪು. ನಮ್ಮ ಸ್ಥಿತಿ ಸಾಮಾನ್ಯ ಜನಗಳಿಗಿಂತ ಕಡೆ. ಏನೋ ಚನ್ನಾಗಿ ಬಟ್ಟೆ ಪಾಕಿಕೊಂಡು ಬರುತ್ತೇವೆ ಅಷ್ಟೆ. ಚುನಾವಣೆಗೆ ನಿಂತು ಗೆದ್ದು ಬರಬೇಕಾದರೆ ಎಲ್ಲಾ ಖಾಲಿಯಾಗಿರುತ್ತವೆ. ಈ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ, ಮತ್ತೆ ಈ ಪೆಟ್ರೋಲ್ ದರ ಹೆಚ್ಚಿರುವುದರಿಂದ ನಮ್ಮಲ್ಲಿ ಕಾರು ಇಟ್ಟಿರುವವರು ತೊಂದರೆಪಡುತ್ತಿರುವುದು ನಮಗೆ ಗೊತ್ತಿದೆ. ಅಂತಹವರಿಗೆ ಸಂಚಾರ ಭತ್ಯೆ ಕೊಡುವುದು ಒಳ್ಳೆಯದು, ನಮ್ಮ ಶಾಸಕರಿಗೆ ಅದನ್ನು ಕೊಟ್ಟರೆ ಅನುಕೂಲವಾಗುತ್ತದೆ. ಕಾರು ನೀರಿನಿಂದ ನಡೆಯುವ ಹಾಗಿದ್ದರೆ ಅದನ್ನು ಕೊಡದಿದ್ದರೂ ಪರವಾಗಿರಲಿಲ್ಲ. ೪೨,೦೦೦ ರೂಪಾಯಿಗಳಿಗೆ ಕಾರು ತಂದು ಅದರ ಬ್ಯಾಟರಿಯನ್ನು ಡೌನ್ ಮಾಡಿ ಮನೆಯಲ್ಲಿ ನಿಲ್ಲಿಸುವುದಕ್ಕೆ ಯಾರೂ ಇಷ್ಟಪಡುವುದಿಲ್ಲ. ಪ್ರವಾಸವನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೀರಿ. ಆದರೆ ನಾನು ಅನೇಕ ಮಂದಿ ಮಂತ್ರಿಗಳನ್ನು ನೋಡಿದ್ದೇನೆ, ತಮ್ಮ ತಮ್ಮ ತೋಟ ನೋಡುವುದಕ್ಕೆ, ಸಂಬಂಧಿಕರ ಮದುವೆಗೆ ಕಾರಿನಲ್ಲೇ ಬರುತ್ತಾರೆ. ಇದು ಆಗಬಾರದು, ಮಾನ್ಯ ರಾಮದೇವ್‌ರವರು ಹೇಳಿದಹಾಗೆ ಅವರು ಕ್ಷೇತ್ರದ ಎಂ.ಎಲ್.ಎ. ಗಳಿಗೂ ಹೇಳುವುದಿಲ್ಲ, ಅವರವರೇ ಜೊತೆಯಾಗಿ ಹೊರಟುಹೋಗುತ್ತಾರೆ. ಇದು ನಿಲ್ಲಬೇಕು ಅದೇನೇ ಇರಲಿ ಇವತ್ತಿನ ಪರಿಸ್ಥಿತಿಯಲ್ಲಿ ಪೆಟ್ರೋಲ್ ದರ ಹೆಚ್ಚಿರುವುದರಿಂದ ೭೫ ಪೈಸೆಯಿಂದ ೧ ರೂಪಾಯಿವರೆಗೆ ಭತ್ಯೆ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ನಾವು ಹೇಳುತ್ತೇವೆಂದು ಅವರು ಮಾಡುವುದಲ್ಲ, ಅವರ ಮನಸ್ಸಿಗೆ ಅದನ್ನು ತಿಳಿದುಕೊಂಡು ಅದನ್ನು ಮಾಡಲಿ ಎಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಸ್ವಾಮಿ, ನಾನು ಈ ತಿದ್ದುಪಡಿಯ ೨ನೇ ಭಾಗದ ಮೇಲೆ ಮಾತನಾಡಬೇಕೆಂದುಕೊಂಡಿದ್ದೆ. ಆದರೆ ಅವರು ಅದನ್ನು ಹಿಂತೆಗೆದುಕೊಂಡಿರುವುದರಿಂದ ನಾನು ಏನನ್ನೂ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಠಲ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಮಸೂದೆಯಲ್ಲಿ ೧೩ (ಎ) ಯನ್ನು ಸೇರಿಸುವುದಕ್ಕೆ ಅವರು ಏನು ಸಲಹೆ ಮಾಡಿದ್ದರೋ ಅದನ್ನು ಅವರು ವಾಪಸ್ ತೆಗೆದುಕೊಂಡಿರುವುದರಿಂದ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ಮಾತ್ರ ಹೇಳಬೇಕಾಗಿದೆ. ಮಾನ್ಯ ದೇವೇಗೌಡರು ಹೇಳಿದಹಾಗೆ ಇವತ್ತು ಶಾಸನ ಸಭೆಗೆ ಸದಸ್ಯರಾಗಿ ಬರತಕ್ಕಂಥವರ ಸ್ಥಿತಿಯನ್ನು ನೋಡಿದರೆ ಮತ್ತು ಅವರ ಪೈಕಿ ಮಂತ್ರಿಗಳಾಗುವವರ ಸ್ಥಿತಿಯನ್ನು ನೋಡಿದರೆ ಇನ್ನು ಮುಂದಕ್ಕೂ ಕೂಡ ಈ ಒಂದು ಅನುಕೂಲತೆಯನ್ನು ಕೊಡುವುದು ಒಳ್ಳೆಯದೆಂದು ಕಾಣುತ್ತದೆ. ಹೆಚ್ಚಾಗಿ ಸಾಮಾನ್ಯ ಜನರೇ ಸದಸ್ಯರಾಗಿ ಈ ಸದನಕ್ಕೆ ಬರುತ್ತಿದ್ದಾರೆ. ಅವರ ಪ್ರತಿನಿಧಿಗಳು ಮಂತ್ರಿಗಳಾಗಿ ಬರುತ್ತಿದ್ದಾರೆ. ಇಂತಹದು ಜಾಸ್ತಿಯಾಗಬೇಕೆಂಬುದೇ ನಮ್ಮ ಅಭಿಪ್ರಾಯ ಕೂಡ. ಆದ್ದರಿಂದ ಅವರಿಗೆ ಕೆಲವು ಅನುಕೂಲತೆಗಳನ್ನು ಕೊಡಲೇಬೇಕು. ಅದರಲ್ಲಿ ಯಾರಿಗೂ ಭಿನ್ನಾಭಿಪ್ರಾಯ ಇಲ್ಲ, ಆದರೆ ನಾವೆಲ್ಲಾ ಇವತ್ತು ಸಂದಿಗ್ಧ ಪರಿಸ್ಥಿತಿಯಲ್ಲಿ ಇದ್ದೇವೆ. ನಮ್ಮಲ್ಲಿ ಅನೇಕರಿಗೆ ಇನ್ನೂ ಕೂಡ ಪೂರ್ತಿಯಾಗಿ ಯಾರಿಗೂ ಮನೆ ಇಲ್ಲ, ಆಸ್ತಿ ಇಲ್ಲ. ಯಾರು ಸಂಪೂರ್ಣವಾಗಿ

ತಮ್ಮ ಇಡೀ ಜೀವಮಾನವನ್ನು ರಾಜಕೀಯದಲ್ಲಿ ರಾಷ್ಟ್ರದ ಹಿತಕ್ಕೋಸ್ಕರ ವಿನಿಯೋಗ ಮಾಡಿದ್ದಾರೆಯೋ ಅಂತಹವರು ಪೂರ್ತಿಯಾಗಿ ಅಧಿಕಾರದಲ್ಲಿ ಇಲ್ಲ. ಯಾರೂ ಇಲ್ಲಿಯವರೆಗೆ ಪೂರ್ತಿಯಾಗಿ ಅಧಿಕಾರದಲ್ಲಿ ಇಲ್ಲ. ಅಂತಹವರ ಸಂಖ್ಯೆ ಜಾಸ್ತಿಯಾಗುತ್ತಿದೆ. ನಾವು ಸದಾಶಿವನಗರಕ್ಕೆ ಹೋದರೆ ಮಾಜಿ ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳಾಗಿರುವ ಅನೇಕ ಮಂದಿಗೆ, ನಮ್ಮ ರಾಜ್ಯದವರಷ್ಟೇ ಅಲ್ಲ ಇಡೀ ದೇಶಾದ್ಯಂತ ಮಾನ್ಯ ಮಂತ್ರಿಗಳಾಗಿದ್ದವರಿಗೆ ಎಲ್ಲರಿಗೂ ದೊಡ್ಡ ದೊಡ್ಡ ಸೌಧಗಳು ಇದ್ದಾವೆ ಎಂದು ನಾವು ಕೇಳಿದ್ದೇವೆ. ಇಪತ್ತಿನ ದಿವಸ ಅದನ್ನು ನಾವು ನೋಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಇವತ್ತು ನಾವು ಮನೆ ಇರುವವರಿಗೆ ತಮ್ಮ ಸ್ವಂತ ಆಸ್ತಿ ಇದ್ದು ಉತ್ಪನ್ನ ಸ್ಥಿತಿಯಲ್ಲಿ ಇರುವವರಿಗೆ ಈ ಸವಲತ್ತುಗಳನ್ನು ಕೊಡಬೇಕಾದ ಅವಶ್ಯಕತೆ ಇಲ್ಲ. ಅವರಿಗೆ ಕೊಡುವ ಅವಶ್ಯಕತೆಯಿಲ್ಲ ಎಂದು ಹೇಳಿ ಯಾರಿಗೆ ಕೊಡಬೇಕೋ ಅವರಿಗೆ ಅದನ್ನು ತಡೆಯುವುದು ಒಳ್ಳೆಯದಲ್ಲ. ನಮ್ಮ ರಾಜ್ಯದಲ್ಲಿ ಶಾಸಕರಿಗೆ ಯಾರಿಗೆ ಮನೆ ಕಟ್ಟುವುದಕ್ಕೆ ಸೈಟು ಇಲ್ಲ. ಯಾರಿಗೆ ಸ್ವಂತ ಮನೆ ಇಲ್ಲ, ಬಾಡಿಗೆ ಮನೆಯಲ್ಲಿ ಯಾರಿದ್ದಾರೆ ಅಂತಹವರಿಗೆ ಎಲ್ಲಾ ಸವಲತ್ತುಗಳನ್ನು ಕೊಡಬೇಕು. ಕಾರ್ಮಿಕರಾಗಿ ಇರುವವರು ರೈತರಾಗಿ ಇರುವವರು ಈ ಶಾಸನಸಭೆಗೆ ಸದಸ್ಯರಾಗಿ ಮಂತ್ರಿಗಳಾಗಿ ಬರಬಹುದು. ಅಂತಹವರು ಮಂತ್ರಿಗಳಾಗಿ ಇಲ್ಲಿ ಸರ್ಕಾರದ ಮನೆಯಲ್ಲಿ ಇರುತ್ತಾರೆ. ಆ ಸ್ಥಾನದಿಂದ ಹೋದಮೇಲೆ ಅವರು ಎಲ್ಲಿಗೆ ಹೋಗಬೇಕೋ ಅವರಿಗೇ ಗೊತ್ತಾಗುವುದಿಲ್ಲ. ಅಂತಹವರಿಗೆ ಹೆಚ್ಚು ಹೆಚ್ಚಾಗಿ ಸವಲತ್ತುಗಳನ್ನು ಕೊಟ್ಟರೆ ರಾಜಕೀಯದಲ್ಲಿ ಹೆಚ್ಚು ಹೆಚ್ಚಾಗಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ. ಮಿಡಲ್ ಇನ್‌ಕಂ ಗ್ರೂಪ್‌ನವರಿಗೆ ಒಂದು ಸಾಮಾನ್ಯತರದ ವಸತಿ ಸೌಕರ್ಯವನ್ನು ಏರ್ಪಡಿಸಿಕೊಳ್ಳುವುದಕ್ಕೆ ನಮಗೆಲ್ಲರಿಗೂ ಅನುಕೂಲ ಇರುತ್ತದೆ. ಹೇಗೆಂದರೆ ಹುಡ್ಕೋದವರು ಹಣ ಕೊಡುತ್ತಾರೆ. ಎಲ್. ಐ. ಸಿ. ಯವರು ಹಣ ಕೊಡುತ್ತಾರೆ, ಹೌಸಿಂಗ್‌ಬೋರ್ಡ್‌ನವರು ಕೊಡುತ್ತಾರೆ. ಆದರೆ ಅದರ ಬದಲು ಸರ್ಕಾರದಿಂದಲೇ ಅವರಿಗೆ ಅಡ್ವಾನ್ಸ್ ಆಗಿ ಕೊಡುವುದು ಒಳ್ಳೆಯದು ಹೇಗಿದ್ದರೂ ಅದನ್ನು ತಾವು ವಸೂಲು ಮಾಡುತ್ತೀರಿ. ಫೈನಲ್‌ಆಗಿ ಅವರಿಗೆ ಅದನ್ನು ಕೊಡುವುದಲ್ಲ. ಅಂತಹ ಅನುಕೂಲಗಳನ್ನು ಮಾಡಿಕೊಡುವುದು ಒಳ್ಳೆಯದು. ೮೫ ಸಾವಿರ ರೂಪಾಯಿಗಳನ್ನು ಬೇಕು ಬೇಕಾದವರಿಗೆಲ್ಲಾ ಕೊಟ್ಟು ಅವರು ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಆ ರೀತಿಯಲ್ಲಲ್ಲ ನಾನು ಹೇಳುತ್ತಿರುವುದು. ಈ ವಿಚಾರದಲ್ಲಿ ಒಂದು ಪರಿಮಿತಿಗೆ ಒಳಪಟ್ಟು ಯಾರಿಗೆ ಅವಶ್ಯಕತೆ ಇದೆ ಅಂತಹವರಿಗೆ ಅದನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತಿದೆ. ಈಗಾಗಲೇ ವಾಪಸ್ಸು ತೆಗೆದುಕೊಂಡಿರತಕ್ಕಂಥ ಶಿದ್ದುಪಡಿಯ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ಇದರಲ್ಲಿ ಉಳಿದ ಅನುಕೂಲತೆಗಳನ್ನು ಏನು ಕೊಡಬೇಕೆಂದು ಹೇಳಿದ್ದಾರೆ ಏನು ಪ್ರವಾಸಭತ್ಯ ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ ಅದು ನ್ಯಾಯವಾದುದಾಗಿದೆ. ಆದ್ದರಿಂದ ಈ ಮಸೂದೆಯನ್ನು ಎಲ್ಲರೂ ಬೆಂಬಲಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ರಾಮಚಂದ್ರರೆಡ್ಡಿ (ವರ್ತೂರು).—ಸನ್ಮಾನ್ಯ ಅಧ್ಯಕ್ಷರೆಯವರೇ, ಈಗಾಗಲೇ ಈ ವಿಷಯದ ಬಗ್ಗೆ ಅನೇಕರು ಮಾತನಾಡಿದ್ದಾರೆ. ಈಗಾಗಲೇ ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವುದರಿಂದ ಮಂತ್ರಿಗಳ ಸಂಚಾರ ಭತ್ಯವನ್ನು ಜಾಸ್ತಿ ಮಾಡಬೇಕೆಂದು ಕೂಡ ಅವರು ವಾದ ಮಾಡಿದ್ದಾರೆ. ಆದರೆ ನಾನು ಹೇಳುವುದೇನೆಂದರೆ ಮಂತ್ರಿಗಳಿಗೆ ಸಂಚಾರ ಭತ್ಯವನ್ನು ಜಾಸ್ತಿ ಮಾಡಕೂಡದು. ಈಗ ಕೊಡಬೇಕೆಂದಿರುವ ೭೫ ಪೈಸೆ ಅದೇ ಜಾಸ್ತಿಯಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರು ಇದರ ಮೇಲೆ ಚರ್ಚೆ ಪ್ರಾರಂಭಿಸುತ್ತಿದ್ದಾಗ ಈಗ ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ; ಆದ್ದರಿಂದ ಮಂತ್ರಿಗಳಿಗೆ ೭೫ ಪೈಸೆಯಿಂದ ೧ ರೂಪಾಯಿವರೆಗೆ ಸಂಚಾರ ಭತ್ಯವನ್ನು ಜಾಸ್ತಿ ಮಾಡುವುದರಲ್ಲಿ ಯಾವ ತಪ್ಪೂ ಇಲ್ಲ ಎಂದು ಹೇಳಿದರು. ಅವರು ಹಿಂದೆ ಸಾರಿಗೆ ಮಂತ್ರಿಗಳಾಗಿದ್ದಾಗ, ಬೆಂಗಳೂರು ನಗರದಲ್ಲಿ ಆಟೋ ಚಾಲಕರ ಮುಷ್ಕರ ನಡೆದಾಗ 'ಪೆಟ್ರೋಲ್ ದರ ಜಾಸ್ತಿಯಾಗಿದೆ' ಎಂದು ಅವರು ಇದೇ ಸದನದಲ್ಲಿ ಹೇಳಿದ್ದಾರೆ. ಈ ಪೆಟ್ರೋಲ್ ದರ ಹೆಚ್ಚಾದ್ದರಿಂದ ಆದು ಸಂಚಾರದ ಮೇಲೆ ಎಷ್ಟು ದರ ಜಾಸ್ತಿ ಬೀಳುತ್ತದೆ ಎಂಬ ಬಗ್ಗೆ ಪರಿಣತರ ಸಲಹೆಯನ್ನು ತೆಗೆದುಕೊಂಡಿದ್ದರು. ಆ ಸಲಹೆಯ ಪ್ರಕಾರ ಒಂದು ಆಟೋರಿಕ್ಷಾಕ್ಕೆ ಕೇವಲ ಒಂದು ಕಿಲೋಮೀಟರ್‌ಗೆ ೪ ಪೈಸೆಯಷ್ಟು ಮಾತ್ರ ಹೆಚ್ಚಾಗುತ್ತದೆ ಎಂದು ಹೇಳಿದ್ದರು: ಅದಕ್ಕಿಂತ ಹೆಚ್ಚು ಏರ್ಚಾಗುವುದಿಲ್ಲವಾದ್ದರಿಂದ ಆಟೋ ಚಾಲಕರ ಮುಷ್ಕರ ಒಂದು ರೀತಿಯಲ್ಲಿ ಸರ್ಕಾರಕ್ಕೆ ಬೆದರಿಕೆ ಮಾಡುವಂಥಾದ್ದಾಗಿದೆ ಎಂದು ಹೇಳಿದ್ದರು. ಅಂದಿನ ಸಾರಿಗೆ ಸಚಿವರು ಇವತ್ತು ಮಾನ್ಯ ವಿರೋಧಪಕ್ಷದ ನಾಯಕರಾಗಿದ್ದಾರೆ. ಅವರು ಅಂದಿನ ಅದೇ ಧಾಟಿಯನ್ನು

ಮುಂದುವರಿಸುತ್ತಾರೆಯೇ ಎಂದು ನೋಡಿದಾಗ ದುರಾದೃಷ್ಟವಶಾತ್ ಅವರು ಏನು ಹೇಳಿದರು ಎಂದರೆ 'ಮಂತ್ರಿಗಳು ಕೇಳಿದ್ದಾರೆ, ೨೫ ಪೈಸೆಯಷ್ಟು ಮಾತ್ರ ಹೆಚ್ಚಾಗುತ್ತದೆ ಪರವಾಗಿಲ್ಲ ಕೊಟ್ಟು ಖಿಡಿ' ಎಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಹಿಂದೆ ಆಟೋರಿಕ್ಷಾ ಚಾಲಕರು ಮುಷ್ಕರ ಮಾಡಿದಾಗ ತಜ್ಞರ, ಪರಿಣತರ ಸಲಹೆ ಮೇರೆಗೆ ಕೇವಲ ೪ ಪೈಸೆಯಷ್ಟು ಹೆಚ್ಚು ಮಾಡಿದರು ಈಗ ಅದೇ ರೀತಿ ಒಂದು ಕಾರಿಗೆ ತಜ್ಞರ ಸಲಹೆಯ ಮೇರೆಗೆ ೧೦ ಪೈಸೆಯವರೆಗೆ ಹೆಚ್ಚು ಮಾಡಬೇಕೆಂದು ಕೇಳುತ್ತಿದ್ದಾರೆ. ಆಟೋರಿಕ್ಷಾ ಚಾಲಕರು ನಿಮ್ಮ ಹಾಗೆ ಮಂತ್ರಿಗಳಾಗಿ ಇಲ್ಲ, ಅವರು ಅದರಲ್ಲೇ ಅವರ ಜೀವನವನ್ನು ನಡೆಸಬೇಕು. ಪೆಟ್ರೋಲ್ ದರದ ಹೆಚ್ಚಳವನ್ನು ನಿಭಾಯಿಸಿಕೊಂಡು ಅವರ ಜೀವನವನ್ನು ನಡೆಸುವುದ ಕ್ಕೋಸ್ಕರ ಕೇವಲ ೪ ಪೈಸೆಯಷ್ಟು ಜಾಸ್ತಿ ಮಾಡಿದ್ದಾರೆ ಆಂದಾಗ ಅವರು ಹೇಗೆ ತಮ್ಮ ಜೀವನವನ್ನು ನೆಮ್ಮದಿಯಿಂದ ನಡೆಸುವುದಕ್ಕಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಈಗ ಮಂತ್ರಿಗಳಿಗೆ ಮಾತ್ರ ೨೫ ಪೈಸೆಯಷ್ಟು ಜಾಸ್ತಿ ಮಾಡುವುದು ಅನ್ಯಾಯ ಎಂದು ನಾನು ಇದನ್ನು ಪ್ರತಿಭಟಿಸುತ್ತೇನೆ. ಆಗ ಆಟೋರಿಕ್ಷಾ ಚಾಲಕರು ವಿವಿಧ ಸಂಘ ಸಂಸ್ಥೆಗಳ ಮೂಲಕ ವಿವಿಧ ದರಗಳನ್ನು ಹೇಳಿದರು. ಅದೇ ರೀತಿ ನಮ್ಮ ಮಂತ್ರಿಗಳು ವಿವಿಧಿ ರೀತಿಯ ದರಗಳನ್ನು ಈ ಸದನದ ಮುಂದೆ ತಿಳಿಸಿದ್ದಾರೆಯೇ ಎಂಬು ದನ್ನು ತಿಳಿಸಬೇಕು. ಅಥವಾ ಮಂತ್ರಿಗಳ ಸಂಘಗಳು ಏನಾದರೂ ಇದ್ದರೆ ಅದರ ಮೂಲಕ ಇದರಲ್ಲಿ ಹೆಚ್ಚು ಕಡಿಮೆ ಆಗಬೇಕು ಎಂದು ಅವರು ಏನಾದರೂ ಕೇಳಿದ್ದರೆ ಎಂಬುದನ್ನು ತಿಳಿಸಬೇಕು. ಹಾಗೆ ಯಾವ ಒಬ್ಬ ಮಂತ್ರಿಯೂ ಕೇಳದಿದ್ದರೆ ಈ ಸಲಹೆಯನ್ನು ಮಂಡಿಸಿದ್ದಾದರೂ ಏತಕ್ಕೆ ಎಂದು ಕೇಳು ತ್ತೇನೆ. ರಾಜ್ಯದ ಮಂತ್ರಿಗಳು ಪ್ರವಾಸ ಮಾಡುವಾಗ ಅವರ ಕಾರಿನ ಹಿಂದೆ ಅನೇಕ ಕಾರುಗಳು ಹೋಗುತ್ತಿರುತ್ತವೆಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಶಾಸಕರ ಭವನದಲ್ಲಿ ಕೊಡುವ ಕಾರು ಗಳನ್ನು ಬರೀ ಬೆಂಗಳೂರು ನಗರದ ಮಿತಿಯಲ್ಲಿ ಓಡಾಡಿಸುವುದಕ್ಕೆ ಕೊಡುತ್ತಾರೆ. ಅದೇ ರೀತಿ ಮಂತ್ರಿ ಗಳೂ ಸಹ ತಮ್ಮ ಅಧಿಕೃತ ಕಾರುಗಳನ್ನು ಬರೀ ಬೆಂಗಳೂರು ನಗರದ ಮಿತಿಯಲ್ಲಿ ಓಡಾಡಿಸುವುದಕ್ಕೆ ಮಾತ್ರ ಅವಕಾಶವಿರಬೇಕು. ಮತ್ತು ಸರ್ಕಾರಿ ಕೆಲಸದ ಮೇಲೆ ಬೆಂಗಳೂರಿನ ಹೊರಗಡೆ ಪ್ರವಾಸ ಹೋದಾಗ ಮಂತ್ರಿಗಳು ಅಧಿಕಾರಿಗಳ ಕಾರಿನಲ್ಲಿ ಕುಳಿತು ಪ್ರಯಾಣ ಮಾಡಿದರೆ, ಅವರೊಡನೆ ಇಲಾ ಖೆಯ ಸಮಸ್ಯೆಗಳನ್ನು ಚರ್ಚೆ ಮಾಡಬಹುದು, ಪ್ರಯತ್ನ ಪ್ರತ್ಯೇಕ ಕಾರಿನಲ್ಲಿ ಪ್ರಯಾಣ ಮಾಡುವುದರಿಂದು ಂಟಾಗುವ ಅಧಿಕ ಖರ್ಚಿನ ಹೊರೆಯನ್ನು ಕಡಮೆ ಮಾಡಬಹುದು. ಆದುದರಿಂದ, ಹೇಗೆ ಮಂತ್ರಿಗಳಿಗೆ ಮನೆ ಕಟ್ಟಿ ಕೊಳ್ಳಲು ಧನ ಸಹಾಯ ನೀಡಬೇಕೆಂದಿದ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡರೋ ಹಾಗೆಯೇ ಇದನ್ನೂ ಸಹ ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಈಗ ಇರುವ ಎಪ್ಪತ್ತೆ ೈದು ಪೈಸೆಯೇ ಜಾಸ್ತಿ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಮಾನ್ಯ ಮುಖ್ಯ ಮಂತ್ರಿಗಳು).–ಮಾನ್ಯ ಉಪಸಭಾಧ್ಯಕ್ಷರೆಯವರೇ, ಈ ಪುಸೂದೆ ಮೇಲಿನ ಚರ್ಚೆಯಲ್ಲಿ ಹೊರಬಿದ್ದ ಮಾನ್ಯ ಸದಸ್ಯರುಗಳ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಮಂತ್ರಿಗಳು ಮನೆ ಕಟ್ಟಿಸುವುದಕ್ಕೆ ಅಥವಾ ದುರಸ್ತು ಮಾಡುವುದಕ್ಕೆಂದು ಸಾಲ ನೀಡಲು ಉದ್ದೇಶಿಸಿ ತಂದಿದ್ದ ೧೩ (ಎ) ಸೆಕ್ಷನ್ ತಿದ್ದುಪಡಿಯನ್ನು, ನಾನು ಈಗಾಗಲೇ ತಿಳಿಸಿದ ಹಾಗೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಈ ತಿದ್ದುಪಡಿಯನ್ನು ಯಾವ ಕಾರಣಕ್ಕಾಗಿ ತರಲಾಯಿತು ಎಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳಬಯಸುತ್ತೇನೆ, ಮಾನ್ಯ ಕಕ್ಕಿಲಾಯ ಅವರು ಹೇಳಿದ ಹಾಗೆ ಎಲ್ಲೂ ಮನೆ ಇಲ್ಲದ ಮಂತ್ರಿಗಳು ಇದ್ದಾರೆ. ಬೆಂಗಳೂರಿನಲ್ಲಾಗಲೀ ಅಥವಾ ಇನ್ನೆಲ್ಲೇ ಆಗಲಿ ಮನೆ ತೆಗೆದುಕೊಳ್ಳಲು ಅಥವಾ ಕಟ್ಟಲು ಮಂತ್ರಿಗಳಿಗೆ ಗೃಹನಿರ್ಮಾಣ ಮಂಡಲಿ ಸಾಲ ನೀಡುತ್ತಿಲ್ಲ. ೧೯೬೩ ರ ಸುಮಾರಿನಲ್ಲಿ ನಾನು ವಸತಿ ಗೃಹನಿರ್ಮಾಣದ ಸಚಿವನಾಗಿದ್ದಾಗ ಇದನ್ನು ನಿಲ್ಲಿಸಿದವನು ನಾನು. ಕಾರಣ : ಗೃಹನಿರ್ಮಾಣ ಮಂಡಲಿಯಿಂದ ಮಳಿಗೆಗಳನ್ನು ಕಟ್ಟುವುದಕ್ಕೆ ಹೆಚ್ಚಿಗೆ ಸಾಲ ಕೊಟ್ಟಿದ್ದರು. ಈ ರೀತಿ ಸಾಲದ ಹಣ ದುರುಪಯೋಗವಾಗಿದ್ದು ನೋಡಿ ಅದನ್ನು ನಿಲ್ಲಿಸಬೇಕಾಗಿ ಬಂತು. ಅಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟುಬಿಟ್ಟಿದ್ದರು. ಈಗ ಗೃಹನಿರ್ಮಾಣ ಮಂಡಲಿಯಲ್ಲಿ ಕೇವಲ ಮಂತ್ರಿಗಳಿಗೆ ಸಾಲ ಕೊಡಬೇಕೆಂದು ತರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಮನೆ ಕಟ್ಟಲು ಸಾಲ ಕೊಡಬೇಕೆಂ ದರೆ, ಅದನ್ನು ಸಾರ್ವತ್ರಿಕವಾಗಿ ಕೊಡಬೇಕಾಗುತ್ತದೆ. ಆದುದರಿಂದ, ಇದನ್ನು ಮಿನಿಸ್ಟರ್ಸ್ ಸ್ಯಾಲರಿ ಬಿಲ್‌ನಲ್ಲಿ ತಂದದ್ದಾಗಿದೆ. ಮಂತ್ರಿಗಳಿಗೆ ಮನೆಯ ಅಗತ್ಯತೆ ಇದೆ ಎಂದು ಎಲ್ಲರಿಗೂ ಅನು ಭವವಿದೆ. ಆದರೆ, ಈ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಆದು ಬೇಡವೆಂದು ಹೇಳಿದ ಮೇಲೂ, ಬಹುಮತ ನನಗಿದೆ ಎಂದು ಒತ್ತಾಯಪಡಿಸಿ ಅದನ್ನು ತರುವ ಇಚ್ಛೆ ನನಗಿಲ್ಲ. ಆದುದರಿಂದ, ಅದನ್ನು ನಾನು ವಾಪಸ್ಸು ತೆಗೆದುಕೊಳ್ಳಲು ಸಿದ್ಧನಿದ್ದೇನೆ.

ಇನ್ನು ಮಂತ್ರಿಗಳ ಪ್ರಯಾಣ ಭತ್ಯವನ್ನು ಪ್ರತಿ ಕಿ.ಮಿ.ಗೆ ೭೫ ಪೈಸೆ ಇದ್ದುದನ್ನು ೧–೦೦ ರೂಪಾಯಿಗೆ ಏರಿಸಬೇಕೆಂದು ತಿದ್ದುಪಡಿ ತರಲಾಗಿದೆ. ಇದಕ್ಕೆ ಒಬ್ಬಿಬ್ಬ ಮಾನ್ಯ ಸದಸ್ಯರನ್ನು ಬಿಟ್ಟು ಎಲ್ಲರೂ ಒಪ್ಪಿದ್ದಾರೆ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ನಾನೂ ಒಪ್ಪಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಒಬ್ಬಿಬ್ಬರೆಂಗು ನಾನು ಹೇಳಿದ್ದರಲ್ಲಿ ತಾವು ಏರಡನೆಯವರು ! ತಮ್ಮ ನಾಯಕರು ಒಪ್ಪಿದರೂ ನೀವು ಒಪ್ಪುವುದಿಲ್ಲದಲ್ಲ. ತಾವು ಈಗ ಯಾವ ಪಕ್ಷದಲ್ಲಿದ್ದೀರಿ ಎನ್ನುವುದು ತಮಗೆ ಗೊತ್ತಿಲ್ಲವೆ ?!

SRI A. LAKSHMI SAGAR.—What the Chief Minister has said is correct; Sri Bhimanna S. Khandre does not know where exactly he is.

ಶ್ರೀ ಭೀಮಣ್ಣ ಖಂಡ್ರೆ.—ನಾನು ಸ್ವತಂತ್ರವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವತಂತ್ರವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುವೆನೆಂದು ಹೇಳುವ ತಾವು ಇಂದಿರಾಗಾಂಧಿ ಕಾಂಗ್ರೆಸ್ ಸೇರಿದ್ದೀರಲ್ಲಾ. ಎಂಥ ವಿಪರ್ಯಾಸ !

ಶ್ರೀ ಭೀಮಣ್ಣ ಖಂಡ್ರೆ.—ಪಕ್ಷದ ನಾಯಕ ಹೇಳಿದ್ದಕ್ಕೆಲ್ಲ ''ಏಸ್'' ಎಂದು ಕೈ ಎತ್ತುವವನಲ್ಲ ನಾನು. ನಿರ್ಧಯವಾಗಿ ನಾನು ಸ್ವತಂತ್ರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವೆನು.

ಶ್ರೀ ಡಿ. ದೇವರಾಜ ಅರಸ್.—ಆಗಲಿ. ಮಂತ್ರಿಗಳ ಪ್ರವಾಸವೆಂದರೆ ಹೇಗಿರಬೇಕೆಂದು ಅನೇಕ ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ತಿಳಿಸಿದರು--ವಿರೋಧ ಪಕ್ಷದ ನಾಯಕರ ಆಡಿಯಾಗಿ. ಇದಕ್ಕಾಗಿ ಎಂಟು ಲಕ್ಷ ರೂಪಾಯಿಗಳ ಅಂದಾಜು ಇಟ್ಟುಕೊಳ್ಳಲಾಗಿದೆ. ಇದಕ್ಕಿಂತ ಕಡಮೆ ಅಥವಾ ಜಾಸ್ತಿ ಯಾಗಬಹುದು. ಮಂತ್ರಿಗಳ ಪ್ರವಾಸಗಳನ್ನು ಹೆಚ್ಚಿಸಿ ಮಾಡಬೇಕು ಅಥವಾ ಇಷ್ಟೇ ಪ್ರವಾಸ ಮಾಡಬೇಕೆಂದು ಹೇಳುವುದು ವ್ಯಾವಹಾರಿಕವಾಗಿ ಸಾಧ್ಯವಲ್ಲ. ನನ್ನ ದೃಷ್ಟಿಯಲ್ಲಿ ಮಂತ್ರಿಗಳು ಹೆಚ್ಚಿಗೆ ಪ್ರವಾಸ ಮಾಡಬೇಕು ಆದರೆ. ಒಂದೇ ಸಮಾರಂಭಕ್ಕೆ ಅಥವಾ ಒಂದೇ ಕಡೆಗೆ ಮುರಾಲ್ಲು. ಜೆನ ಮಂತ್ರಿಗಳು ಒಟ್ಟಿಗೆ ಹೋಗಬೂಡದೆಂದು ನಾನೂ ಕೂಡ ಅನೇಕಾರ್ತಿ ಹೇಳಿದ್ದೇನೆ ಒಂದೊಂದು ಸಾರಿ ಏನಾಗುತ್ತೆ ಎಂದರೆ, ಸಮಾರಂಭವನ್ನು ಏರ್ಪಾಡು ಮಾಡಿರುವವರು ಒಬ್ಬ ಮಂತ್ರಿಯನ್ನು ಒಪ್ಪಿಸಿಯಾದ ಮೇಲೆ ಇನ್ನೊಬ್ಬ ಮಂತ್ರಿಯನ್ನು ಮೊದಲನೆಯ ಮಂತ್ರಿಗೆ ಗೊತ್ತಿಲ್ಲದಂತೆ ಒಪ್ಪಿಸಿರುತ್ತಾರೆ ! ಸಮಾರಂಭಕ್ಕೆ ಮಂತ್ರಿಗಳು ಹೋದ ಮೇಲೆ ಗೊತ್ತಾಗುತ್ತದೆ. ಇದು. ಇಂತಹದೆಲ್ಲಾ ಆಗುವುದುಂಟು. ಅದನ್ನು ತಪ್ಪಿಸಬೇಕು. ಆದರೆ ಪ್ರವಾಸ ಕಡಿಮೆ ಮಾಡಬೇಕೆಂದರೆ ಅದು ಹೇಗೆ ಮಾಡಬೇಕು ? ಏತಕ್ಕೆ ಮಾಡಬೇಕು. ಎಲ್ಲೂ ಹೋಗದೆ ಇಲ್ಲೇ ಕುಳಿತಿರಿ ಎಂದರೆ ಹೇಗಾಗುತ್ತದೆ ? ಈಗ ರಾಜ್ಯದಲ್ಲಿ ನಾನಾ ರೀತಿಯ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ಕಾರ್ಯಕ್ರಮಗಳು ಒಂದು ಬಗೆಯವಲ್ಲ. ಆದರೆಲ್ಲೂ ಬಡಜನರಿಗೆ ಉಪಯುಕ್ತವಾದ ಕಾರ್ಯಕ್ರಮಗಳು ಸೂತಾರಿವೆ ಬಡಜನರಿಗೆ ಮನೆ ಕಟ್ಟಿಸುವ ವಿಚಾರ, ಭೂಮಿ ಹಂಚುವ ವಿಚಾರ, ನಿವೇಶನ ಕೊಡುವ ವಿಚಾರ, ಬಡ ಜನರಿಗೆ ಕೊಟ್ಟಿದ್ದ ಭೂಮಿಯನ್ನು ಕಿತ್ತುಕೊಂಡಿದ್ದನ್ನು ಮಾರಸ್ಸು ಕೊಡಿಸುವ ವಿಚಾರ–ಹೀಗೆ ನಾನಾ ಕಾರ್ಯಕ್ರಮಗಳಿವೆ. ಆದುದರಿಂದ, ಮಂತ್ರಿಗಳು ಮತ್ತೆ ಮಾನ್ಯ ಸದಸ್ಯರುಗಳು ಹೆಚ್ಚು ಹೆಚ್ಚು ಪ್ರವಾಸ ಮಾಡಿ, ಜನರ ಹತ್ತಿರ ಹೋಗಿ ಅವರ ಕಷ್ಟಗಳನ್ನು ಕೇಳುವ ಮತ್ತೆ ಅವುಗಳನ್ನು ಸರಿಪಡಿಸುವ ಕಾಲವಿದು. ಬೇಗಿರುವಾಗ, ಪ್ರವಾಸಗಳನ್ನು ಮಂತ್ರಿಗಳು ಕಡಮೆ ಮಾಡಬೇಕೆನ್ನುವುದರಲ್ಲಿ ಅರ್ಥವಿಲ್ಲ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ವಿರ್ಯ ಮಾಡುತ್ತಿರುವ ಈ ಸರ್ಕಾರದಲ್ಲಿ ಇನ್ನು ಎಂಟು ಲಕ್ಷ ರೂಪಾಯಿಗಳಲ್ಲಿ ಉಳಿಸಿಬಿಡುತ್ತೇವೆಂದರೆ, ಕನ್ನಡದಲ್ಲಿ ಒಂದು ಗಾದೆ ಹೇಳುತ್ತಾರೆ. ಅದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ !

ಶ್ರೀ ಪೈ. ರಾಮಕೃಷ್ಣ.—ದೇಶದಲ್ಲಿ ಪೆಟ್ರೋಲ್ ಅಭಾವವಿದೆ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಪಕ್ಕಂತೆ ಇರೋಣ. ಆದರೆ, ಮಂತ್ರಿಗಳು ಪ್ರವಾಸ ಹೋಗಬೇಕಾಗುತ್ತವೆ, ಸ್ಥಳಗಳಲ್ಲೇ ಜನಗಳನ್ನು ನೋಡಬೇಕಾಗುತ್ತದೆ, ಅವರ ಕಷ್ಟಗಳನ್ನು ಕೇಳ

ಬೇಕಾಗುತ್ತದೆ, ಮತ್ತೆ ಅವುಗಳಿಲ್ಲವನ್ನೂ ಸರಿ ಮಾಡಬೇಕಾಗುತ್ತದೆ. ಪೆಟ್ರೋಲ್ ಧಾರಣೆ ಹೆಚ್ಚಾಗಿರುವುದರಿಂದ, ಈ ಇಪ್ಪತ್ತೈದು ಪೈಸೆ ಪೆಚ್ಚು ಮಾಡುವುದರಲ್ಲಿ ಯಾರದೂ, ಯಾವುದೇ ಅಭ್ಯಂತರವಿಲ್ಲ. ಬಹಳ ಸಂತೋಷ.

೪–೩೦ ಪಿ. ಎಂ.

ಮಲ್ಲೇಶ್ವರದಿಂದ ಬಂದಿರತಕ್ಕ ನಮ್ಮ ಮಾನ್ಯ ಸ್ನೇಹಿತರು ನಾನು ಎಷ್ಟೋ ಜನ ಮಂತ್ರಿಗಳನ್ನು ಕರೆದುಕೊಂಡು ಹೋಗಿದ್ದೆ ಎಂದು ಹೇಳಿದ್ದಾರೆ. ಅವರನ್ನೇ ಕರೆದುಕೊಂಡು ಹೋಗುತ್ತೇನೆ ಇನ್ನೊಂದು ದಿವಸ ನಾನು ಹೋದಕಡೆಯಲ್ಲೆಲ್ಲಾ ಜನಗಳಿಗೆ ಏನು ಅನಾನುಕೂಲವಾಗುತ್ತದೆಂದು ಕಣ್ಣಾರೆ ನೋಡಲಿ ಎಂದು ಕೇಳಿಕೊಳ್ಳುತ್ತೇನೆ. ನಾನು ಯಾರ ಮನೆಯಲ್ಲೂ ತಿಂಡಿ ಕಾಫಿ ತಿನ್ನುವುದಕ್ಕೆ ಹೋಗಿರಲಿಲ್ಲ. ಟೀಗೆ ಹೋಗಿರಲಿಲ್ಲ. ಕೊಳಚೆ ನಿವಾಸಿಗಳು ಇದ್ದಕಡೆ ಹೋಗಿದೆ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ತಾವು ಮುಖ್ಯಮಂತ್ರಿಗಳಾಗಿ ಎಲ್ಲಾ ಕ್ಷೇತ್ರಗಳಿಗೂ ಬನ್ನಿ. ಪ್ರಸಾರ ಭಾಷಣ ಮಾಡುತ್ತೀರಲ್ಲ ಏಕೆ.

ಶ್ರೀ ಡಿ. ದೇವರಾಜ ಅರಸ್.—ನಾನು ಮಾತನಾಡಿದ್ದನ್ನು ಟೇಪ್ ರೆಕಾರ್ಡ್ ಮಾಡಿದ್ದೀರೇನೋ.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿ ವಿಸ್ತಾರದು ಮಾಡಿದಂತ ಸಭೆಯಲ್ಲಿ ಮಾತನಾಡಿಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಹೌದು.

ಶ್ರೀ ಪಿ. ರಾಂದೇವ್.—ಮುಖ್ಯಮಂತ್ರಿಗಳಾಗಿ ಕೊಳಚೆ ನಿವಾಸಿಗಳ ಕಷ್ಟಸುಖಗಳನ್ನು ನೋಡಿ. ತಾವು ಕೂಡ ನಮ್ಮ ಕ್ಷೇತ್ರಗಳಿಗೆ ಬಂದಾಗ ಮುಖ್ಯಮಂತ್ರಿಗಳನ್ನು ಸ್ವಾಗತ ಮಾಡಬೇಕೆಂಬ ಅಭಿಮಾನ ಇದೆ. ಪಕ್ಕದಲ್ಲಿರುವ ಮಳ್ಳೂರು ಆನಂದರಾವ್ ಮತ್ತು ಜೀವರಾಜ ಆಳ ಅವರಿಗೆ ಪ್ರೋತ್ಸಾಹ ಕೊಡುತ್ತೀರಿ ನನಗೆ ಸಂಕಟವಾಗುವುದಿಲ್ಲವೇ ? ನಾನು ಇತಬೇಕೋ ಬೇಡವೋ ಸ್ವಲ್ಪ ತಾವೇ ಹೇಳಿ. ನಮ್ಮ ಕ್ಷೇತ್ರಕ್ಕೆ ಬಂದಾಗ ನಾನು ತಮ್ಮ ಜೊತೆಯಲ್ಲಿರಬೇಕು.

ಶ್ರೀ ಡಿ. ದೇವರಾಜ ಅರಸ್. —ನನಗೆ ಅರ್ಥವಾಯಿತು. ಇನ್ನೊಂದು ಸಾರಿ ಬರುತ್ತೇನೆ. ತಮ್ಮ ಜೊತೆಯಲ್ಲಿ ಇರುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ರಾಂದೇವ್‌ರವರು ನಮ್ಮ ಜೊತೆಯಲ್ಲಿರುವುದಕ್ಕೆ ಕುತೂಹಲರಾಗಿದ್ದಾರೆ; ಸುಸ್ವಾಗತ.

ಶ್ರೀ ಡಿ. ದೇವರಾಜ ಅರಸ್.—ಅಂದಿನ ದಿವಸ ನಗರಾಡಳಿತ ಮಂತ್ರಿಗಳನ್ನು ಬಿಟ್ಟರೆ ಯಾರೂ ಬಂದಿರಲಿಲ್ಲ. ನಾವು ಹೋದದ್ದರಿಂದ ಅನೇಕರಿಗೆ ಅನುಕೂಲವಾಗಿದೆ. ಇನ್ನು ಅನೇಕ ಕಡೆ ಹೋಗುವುದರಲ್ಲಿದ್ದೇವೆ. ತಮಗೆ ಹೇಳದೇ ಇದ್ದರೆ ಸರಿಯಲ್ಲ ಅಂತ ಹೇಳುತ್ತೇನೆ. I am prepared to defend you. Now you require my protection. May be, it was not wrong on the part of anybody. But you have now brought it to my notice. I shall see whenever I go, the M.L.A. concerned will be with me to whichever party he belongs, There I do not make any distinction. ಆದ್ದರಿಂದ ತಾವು ಏನು ಭಾರಿ ಪೆಟ್ರೋಲ್ ಖರ್ಚು ಮಾಡಿಕೊಂಡು ಹೋಗುತ್ತಾರೆಂದು ತಿಳಿದುಕೊಂಡಿದ್ದೀರಿ ಅದು ಸರಿಯಲ್ಲ. ಅದರಲ್ಲಿಯೂ ಬೆಂಗಳೂರು ನಗರಕ್ಕೆ ಎಷ್ಟು ಖರ್ಚು ಮಾಡಿಕೊಂಡು ಹೋಗುತ್ತೇವೆ. ಇಷ್ಟು ವಿಚಾರ ಮಾನ್ಯ ಅಧ್ಯಕ್ಷಣಿಯವರೆ. ಎಲ್ಲರೂ ಒಪ್ಪಿರುವುದರಿಂದ ಈ ಮಸೂದೆಗೆ ಸಭೆಯು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದೇರೀತಿ ಹೊಸದಾಗಿ ತಂದಿರುವ ಇನ್ನೊಂದು ಮಸೂದೆಯನ್ನು ಕೂಡ ಹಿಂದಕ್ಕೆ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ತಿಳಿಸಿದ್ದೇನೆ. ಅದನ್ನು ತಾವು ಒಪ್ಪಬಹುದು : ನಾನು ತಮ್ಮ ಅನುಮತಿಯನ್ನು ಕೇಳುತ್ತೇನೆ.

MADAM DEPUTY SPEAKER — The question is.

That the Karnataka Ministers' Salaries and Allowances (Second Amendment) Bill, 1979, be taken into consideration.

The motion was adopted

MADAM DEPUTY SPEAKER.—Now we shall take up Clause by Clause consideration of the Bill. Clause 2. There is an amendment. The hon. Member may please move it.

CLAUSE 2

SRI T. R. SHAMANNA.—I move.

That in clause 2 the following proviso shall be added to at the end of the clause.

Provided that in order to conserve petrol, the mileage to be covered to be limited to 2000 Kms per month or 24000 Kms. per year.

The question was proposed

SRI T.R. SHAMANNA.—ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವುದರಿಂದ ೭೦ ಪೈಸೆ ಮೈಲೇಜಿಗೆ ಇದ್ದುದನ್ನು ಒಂದು ರೂಪಾಯಿ ಮಾಡಿರುವ ಬಗ್ಗೆ ಬಿನ್ನಾಭಿಪ್ರಾಯವಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ, ಪ್ರವಾಸ ಮಾಡುವುದರಿಂದ ಬಹಳ ಅನುಕೂಲವಾಗಿಲ್ಲ. ಸ್ವಲ್ಪ ಉಳಿಸುವುದಕ್ಕೆ ಹೋಗಿ ಆಗತಕ್ಕ ಅನುಕೂಲವನ್ನು ಮೊಟಕು ಮಾಡುವುದು ಸರಿಯಾದುದಲ್ಲವೆಂದು ತಿಳಿಸಿದರು. ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಮಂತ್ರಿಗಳ ಪ್ರವಾಸದಲ್ಲಿ ಅಧಿಕಾರಿಗಳ ದಂಡೇ ಇರುತ್ತದೆ. ಇವತ್ತು ಅಧಿಕಾರಿಗಳು ಮಂತ್ರಿಗಳನ್ನು ಕರೆಸಿ ಕಳುಹಿಸುವುದರಲ್ಲಿಯೇ ಕಾಲ ಕಳ್ಳುತ್ತಿದ್ದಾರೆ. ಈಗ ೨೫೦ ಲೀಟರ್ ಪೆಟ್ರೋಲ್ ಉಪಯೋಗಿಸುವುದಕ್ಕೆ ಅವಕಾಶ ಇದೆ. ಇದರಲ್ಲಿ ಸಾಕಷ್ಟು ಪ್ರವಾಸ ಮಾಡಬಹುದು. ಅಧಿಕಾರಿಗಳು ಪೆಚ್ಚಿನ ಸಂಖ್ಯೆಯಲ್ಲಿ ಬರುವುದನ್ನು ತಪ್ಪಿಸಿದರೆ ಸಾಕಷ್ಟು ಪೆಟ್ರೋಲ್ ಉಳಿಸಬಹುದು. ಯಾವುದಾದರೂ ಒಂದು ಮಿತಿ ಹಾಕಿಕೊಳ್ಳುವುದು ಒಳ್ಳೆಯದೆಂದು ಈ ತಿದ್ದುಪಡಿಯನ್ನು ತಂದಿದ್ದೇನೆ, ಅದನ್ನು ಈ ಸಭೆ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ದೇವರಾಜ ಅರಸ್.—ಅವರು ತಂದಿರುವ ತಿದ್ದುಪಡಿಯ ಅಭಿಪ್ರಾಯಕ್ಕೆ ಮಾನ್ಯ ಕೊಡಬಹುದು. ಮಂತ್ರಿಗಳ ಪ್ರವಾಸ ಕಾರ್ಯವನ್ನು ಮಿತಿಗೊಳಿಸುವುದು ಕಷ್ಟ. ಮಂತ್ರಿಗಳ ಜೊತೆಯಲ್ಲಿ ಹೆಚ್ಚಿಗೆ ಅಧಿಕಾರಿಗಳು ಬರುವುದಕ್ಕೂ ಇದಕ್ಕೂ ಸಂಬಂಧ ಇರುವುದಿಲ್ಲ. ತಾವು ಅಧಿಕಾರಿಗಳು ಹೆಚ್ಚಿಗೆ ಬರುವುದನ್ನು ನಿಲ್ಲಿಸುವ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ತಾವು ತಂದಿರುವ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

MADAM DEPUTY SPEAKER :—Does the hon. Member like to with draw his amendment ?

SRI T.R. SHAMANNA :—I press the amendment.

MADAM DEPUTY SPEAKER :—I put the amendment to the vote of the House. question is :

That in clause to the following proviso shall be added to at the end of the clause.

Provided that in order to conserve petrol, the mileage to be covered to be limited to 2000 Kms per month or 24,000 Kms. per year.

The amendment was negatived

MADAM DEPUTY SPEAKER :—Now I will put the clause to the vote of the House. The question is.

That clause 2 do stand part of the Bill.

The motion was adopted

Clause 2 was added to the Bill

CLAUSE 3

MADAM DEPUTY SPEAKER :—There is an amendment

SRI T.R. SHAMANNA :—If the official amendment is moved I will not press my amendment.

MADAM DEPUTY SPEAKER :—There is an amendment given notice of by the Hon. Chief Minister. According to me this cannot be an amendment. If the House so desires it may vote down the clause The question is.

That clause 3 do stand part of the Bill.

The motion was negatived

Clause 3 was deleted from the Bill

CLAUSE 4

MADAM DEPUTY SPEAKER :—There is no amendment. The question is.

That clause 4 do stand part of the Bill.

The motion was adopted

Clause 4 was added to the Bill

CLAUSE 1, etc.

MADAM DEPUTY SPEAKER : The question is

That clause 1, The Long Title, the Preamble, and the Enacting Formula do stand part of the Bill.

The motion was adopted.

Clause 1 The Long Title, the Preamble and the Enacting Formula were added to the Bill

(*Motion to pass*)

SRI D. DEVARAJ URS : Madam, I move.

That the Karnataka Ministers Salaries and Allowances (Second Amendment) Bill, 1979, as amended, be passed.

MADAM DEPUTY SPEAKER : The question is

That the Karnataka Ministers Salaries and Allowances (Second Amendment) Bill, 1979, as amended, be passed.

The motion was adopted and the Bill, as amended, was passed.

MADAM DEPUTY SPEAKER : We shall take up the next Bill.

THE KARNATAKA LEGISLATURE SALARIES PENSIONS AND ALLOWANCES (SECOND AMENDMENT) BILL, 1979.

Motion to consider

SRI K.H. RANGANATH : I move.

That the Karnataka Legislature Salaries, Pensions and Allowances (Second Amendment) Bill, 1979 be taken into consideration.

The question was proposed.

ಶ್ರೀ ಕೆ. ಎಚ್. ರಂಗನಾಥ : (ಕೃಷಿ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) ಸನ್ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಹೆಚ್ಚು ಪ್ರಸ್ತಾಪ ಮಾಡತಕ್ಕಂತಹದ್ದು ವಿಷಯ ಇಲ್ಲ. ಈಗಾಗಲೇ ಈ ಮನೆಗೆ ಗೊತ್ತಿರುವ ಹಾಗೆ ಈ ಟ್ರಾವಲಿಂಗ್ ಅಲೋಯನ್ಸ್‌ನಿಂದ ಬೈಸಿಕಲಿನಿಂದ ಅದನ್ನು ಏರಿ ರೂಪಾಯಿ ಮಾಡತಕ್ಕಂತಾದ್ದು ಮತ್ತೆ ಕ್ಲಾಸ್-೫ರಲ್ಲಿ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ. ಮತ್ತು ಮುಖ್ಯ ಸಚೇತಕರಿಗೆ ಮನೆ ಕಟ್ಟುವುದಕ್ಕೆ ಅಥವಾ ಜಾಗ ಕೊಂಡುಕೊಳ್ಳುವುದಕ್ಕೆ ಅಡ್ವಾನ್ಸ್ ಕೊಡತಕ್ಕಂತಾದ್ದು ಹಿಂದು ಕಲಂ ಸೇರಿಸತಕ್ಕಂತಾದ್ದು. ಈಗ ಏನಕ್ಕಾಗಿ ಟ್ರಾವಲಿಂಗ್ ಅಲೋಯನ್ಸ್ ಹೆಚ್ಚು ಮಾಡಿದೆ ಅನ್ನುವುದು ಈ ಸಭೆಗೆ ಗೊತ್ತಿದೆ. ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವುದರಿಂದ ಹೆಚ್ಚು ಮಾಡತಕ್ಕ ಅವಶ್ಯಕತೆ ಬಂದಿದೆ. ಇದಕ್ಕಾಗಿ ಬಂದಾಜು ೪೦ ಸಾವಿರ ರೂಪಾಯಿ ವಿಚಾರಗಂತ್ತಾದೆ ಅನ್ನತಕ್ಕಂತಾದ್ದನ್ನು ಫೈನಾನ್ಸಿಯಲ್ ಮೆಮೊರಾಂಡಮ್‌ನಲ್ಲಿ ಮಂತ್ರಿ ಪರಿಗೇಟೆಡ್ ಮೆಂಬರ್ಸ್ ಸಪ್ಲಿಮೆಂಟ್ (೨) ಕಾಲಮ್ಮಿನ (೩) ರಲ್ಲಿ ನಮೂದು ಮಾಡಲಾಗಿದ್ದು ಕೊನೆಗೆ ಸಪ್ಲಿಮೆಂಟ್ (೨)ರಲ್ಲಿ ನೋ ಬಿ ಪ್ರುವ್ಡ್ ಕೈಬೈಪ್ ಅಂತ ಹೇಳಿ ಈ ಮನೆ ಅಡ್ವಾನ್ಸ್ ಕೊಡಬೇಕಂತಾದ್ದನ್ನು ಮೆಮೊರಾಂಡಮ್ (೩)ರಲ್ಲಿ ತೋರಿಸಲಾಗಿದೆ. ಇಷ್ಟು ಈ ವಿಷಯದಲ್ಲಿ ಅವಶ್ಯಕವಾಗಿತಕ್ಕಂತಾದ್ದು. ಮಾನ್ಯ ಸಭೆ ಇದನ್ನು ಒಪ್ಪಿಕೊಳ್ಳುತ್ತಾರೆಯೆಂದು, ತಮ್ಮ ಮೂಲಕ ಸಭೆಯ ಸದಸ್ಯರಿಗೆ ತಿಳಿಸಿ ಈ ಸಭೆಯ ಮುಂದೆ ಈ ಬಿಲ್ಲನ್ನು ಮಂಡಿಸುತ್ತಿದ್ದೇನೆ.

SRI A. LAKSHMI SAGAR :—May I know whether the Hon. Minister would be willing to delete sub-clause II of clause 3 as the Government did in the case of the other Bill because the principle is the same. If it is done there will not be much discussion. I have given notice of an amendment for deletion of clause 3.

ಶ್ರೀ ಕೆ ಎಚ್. ರಂಗನಾಥ್ :—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಸೂಚಿಸಿರತಕ್ಕ ಅಮೆಂಡ್‌ಮೆಂಟ್ ಇನ್ನೂ ಸಭೆಯ ಮುಂದೆ ಬಂದಿಲ್ಲ. ಆದರೆ ನಾನು ಅದನ್ನು ಒಪ್ಪಿದ್ದೇನೆ. ಸಭೆಯ ಸದಸ್ಯರು ಯಾಕಾಗಿ ಮಾಡಿ ಒಂದು ತಿದ್ದುಪಡಿಗೆ ತಾವು ಸೂಚನೆ ಕೊಡಿ ಇದು ಆಗುವಂತ ದು ಅಂತ ಹೇಳುವುದಾದರೆ ನನ್ನ ಆಕ್ಷೇಪಣೆಯಿಲ್ಲ ನನ್ನ ಬೆಂಬಲವನ್ನು ಅದನ್ನು ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನಪಡುವುದಾಗಿ ಹೇಳುತ್ತೇನೆ. ಮುಂತ್ರಿಗಳಿಗೆ ಸಂಬಳ ಕೊಡತಕ್ಕದರ ಬಗ್ಗೆ ಒಂದು ಪ್ರಶ್ನೆ ಬಂದು ಆ ಆಕ್ಟಿನಲ್ಲಿ ಮಂತ್ರಿ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ಮೇಲ್ಮನೆ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ. ಇಲ್ಲಿಯ ವಿರೋಧ ಪಕ್ಷದ ನಾಯಕರಿಗೆ, ಅಲ್ಲಿಯ ವಿರೋಧ ಪಕ್ಷದ ನಾಯಕರಿಗೆ ಮುಖ್ಯ ಸಚೇತಕರಿಗೆ ಬಿಡಬೇಕು ಅನ್ನುವ ಅಂಶ ಪ್ರಸ್ತಾಪವಾಗಿ ಅದರ ಬಗ್ಗೆ ಸರ್ಕಾರ ಏನು ನಿಲುವು ತಾಳಬೆ ಅದನ್ನು ನಾನು ಈ ಸಭೆಯ